# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಸೆಪ್ಟೆಂಬರ್ 27, 2020

ಸಂಪುಟ : 47 ಸಂಚಿಕೆ : 138 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com


# ಭೂ ಸುಧಾರಣಾ ವಿಧೇಯಕ ಅಂಗೀಕಾರ



**ಕೃಷಿಕರಲ್ಲದವರೂ ಜಮೀನು ಖರೀದಿಸಲು ಅನುಮತಿ ನೀಡುವ ವಿಧೇಯಕ ಜೆಡಿಎಸ್ ಬೆಂಬಲದೊಂದಿಗೆ ವಿಧಾನಸಭೆಯಲ್ಲಿ ಅಂಗೀಕಾರ**

ಬೆಂಗಳೂರು, ಸೆ. 26- ರೈತರಿಂದ ತೀವ್ರ ವಿರೋಧಕ್ಕೆ ಒಳಗಾಗಿದ್ದ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕಕ್ಕೆ ರಾಜ್ಯ ಬಿಜೆಪಿ ಸರ್ಕಾರ ವಿಧಾನಸಭೆಯಲ್ಲಿ ಅಂಗೀಕಾರ ಪಡೆದುಕೊಂಡಿದೆ.

ತಿದ್ದುಪಡಿ ವಿಧೇಯಕವು ರೈತರ ಪಾಲಿಗೆ ಮರಣ ಶಾಸನವಾಗಿದ್ದು, ಈ ವಿಧೇಯಕವನ್ನು ಹಿಂದಕ್ಕೆ ಪಡೆಯುವಂತೆ ಪ್ರತಿಪಕ್ಷ ಕಾಂಗ್ರೆಸ್ ಆಗ್ರಹಿಸಿದರೂ ಇದಕ್ಕೆ ಮಣಿಯದ ಸರ್ಕಾರ, ಜೆಡಿಎಸ್ ಬೆಂಬಲದೊಂದಿಗೆ ಕೃಷಿ ಭೂಮಿಯನ್ನು ಕೃಷಿಕರಲ್ಲದವರೂ ಪಡೆಯಲು ಅವಕಾಶ ಮಾಡಿಕೊಟ್ಟಿದೆ.

ರಾಜ್ಯದಲ್ಲಿ ಕೈಗಾರಿಕೋದ್ಯಮ ಪ್ರೋತ್ಸಾಹಿಸಲು ಮತ್ತು ಯುವಕರನ್ನು ಕೃಷಿಗೆ ಸೆಳೆಯುವ ಉದ್ದೇಶದಿಂದ ಈ ಮಸೂದೆ ತರಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಕಂದಾಯ ಸಚಿವ ಆರ್. ಅಶೋಕ್ ತಿದ್ದುಪಡಿ ಮಸೂದೆ ಬಗ್ಗೆ ಸಮರ್ಥನೆ ಮಾಡಿಕೊಂಡರು.

ಕೃಷಿ ಭೂಮಿಯನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ವಿದ್ಯಾವಂತರು, ಯುವಕರು ಕೃಷಿಗೆ ತೆರಳುವ ಆಸಕ್ತಿ ಹೊಂದಿದ್ದಾರೆ. ಆದರೆ, ಕಾಯ್ದೆ ಅವರ ಕೈ ಕಟ್ಟಿದೆ ಎಂದು ತಿಳಿಸಿದರು.

ಒಂದೆಡೆ ಯುವಕರನ್ನು ಕೃಷಿಗೆ ಸೆಳೆಯುವುದರ ಜತೆಗೆ ನಿರುದ್ಯೋಗ ಸಮಸ್ಯೆ ಬಗೆಹರಿಸಿ ರಾಜ್ಯದ ಸಂಪನ್ಮೂಲ ಕ್ರೋಢೀಕರಣಕ್ಕೆ, ಕೈಗಾರಿಕೆಗೆ ಒತ್ತು ಕೊಡಬೇಕಾಗಿದೆ ಎಂದು ಯಡಿಯೂರಪ್ಪ ಹೇಳಿದರು.

ಕೃಷಿಗೆ ಬಳಕೆಯಾಗದ ಭೂಮಿಯನ್ನು ಈ ಉದ್ದೇಶಗಳಿಗೆ ಬಳಸಿಕೊಂಡು ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದು. ನಿರುದ್ಯೋಗ ಸಮಸ್ಯೆಯನ್ನು ಬಗೆ ಹರಿಸುವುದು ಇದರ ಮೂಲ ಉದ್ದೇಶ. ಯಾವುದೇ ವ್ಯವಹಾರಕ್ಕಾಗಲೀ ಅಥವಾ ರಿಯಲ್ ಎಸ್ಟೇಟ್‌ಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇಂಥ ಕಾಯ್ದೆ ತಂದಿಲ್ಲ ಎಂದು ಅಶೋಕ್ ಸಮರ್ಥಿಸಿಕೊಂಡರು.

ನೀವು ಈ ಹಿಂದೆ ತಂದಿದ್ದ ಕಾಯ್ದೆಯನ್ನೇ ನಾವು ಮತ್ತೊಮ್ಮೆ ಪರಾಮರ್ಶೆ ಮಾಡಿ ರಾಜ್ಯದ ದೃಷ್ಟಿಯಿಂದ ಮಾರ್ಪಾಟು ಮಾಡಿದ್ದೇವೆ ಎಂದರು.

ವಿಧೇಯಕ ಕುರಿತು ಮಾತನಾಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ, ಉದ್ಯಮಿಗಳು, ಬಹುರಾಷ್ಟ್ರೀಯ ಕಂಪನಿಗಳು ಹಾಗೂ ರಿಯಲ್ ಎಸ್ಟೇಟ್‌ಗೆ ಅನುಕೂಲ ಮಾಡಲು ಇಂಥ ಕಾಯ್ದೆ ತರುತ್ತಿದ್ದೀರಿ. ಕಾಯ್ದೆಯನ್ನು ಹಿಂದಕ್ಕೆ ಪಡೆಯಿರಿ ಎಂದರು.

ರೈತರಿಗೆ ವಂಚಿಸಿ ಸುಲಭದಲ್ಲಿ ಭೂಮಿ ಖರೀದಿ ಮಾಡಲು ನೆರವಾಗುವ ಉದ್ದೇಶದಿಂದಲೇ ಈ ಕಾಯ್ದೆ ತರಲಾಗುತ್ತಿದೆ. ದಿ.ದೇವರಾಜ್ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಉಳುವವನೇ ಭೂಮಿಯ ಒಡೆಯನನ್ನಾಗಿ ಮಾಡಿದ್ದರೆ, ಬಿಜೆಪಿ ಸರ್ಕಾರ ಉಳ್ಳವನನ್ನೇ ಭೂ ಒಡೆಯನನ್ನಾಗಿ ಮಾಡಲು ಹೊರಟಿದೆ.

ಕಾಯ್ದೆಯ 79 ಎ, 79 ಬಿ, ಸಿ ಹಾಗೂ 80ನೇ ಕಾಲಂ ಅನ್ನು ರದ್ದುಗೊಳಿಸಿ ಕಲಂ 63ರಲ್ಲಿ ನಿಗದಿಪಡಿಸಿದ ಭೂ ಒಡೆತನದ ಮಿತಿಯನ್ನು ದ್ವಿಗುಣಗೊಳಿಸಲು ಹೊರಟಿದ್ದೀರಿ. ಕೃಷಿ ಕ್ಷೇತ್ರದ ಶವ ಪೆಟ್ಟಿಗೆಗೆ ಹೊಡೆದಿರುವ ಕೊನೆ ಮೊಳೆಯಾಗಿದೆ ಎಂದು ಕಿಡಿ ಕಾರಿದರು. ಈ ಎಲ್ಲ ಸೆಕ್ಷನ್‌ಗಳು ಭೂ ಮಾಲೀಕರ ದೌರ್ಜನ್ಯದಿಂದ ಸಣ್ಣ ರೈತರನ್ನು ರಕ್ಷಿಸುವ, ಸಣ್ಣ ಪುಟ್ಟ ಹಿಡುವಳಿದಾರರ ಅಸಹಾಯಕತೆಯನ್ನು ಶ್ರೀಮಂತರಿಂದ ರಕ್ಷಿಸುವುದಾಗಿತ್ತು. ಇವೆಲ್ಲವನ್ನೂ ಗಾಳಿಗೆ ತೂರಿ ಬಂಡವಾಳಶಾಹಿಗಳ ಕೈಗೆ ಕೊಡುತ್ತಿದ್ದೀರಿ ಎಂದು ದೂರಿದರು.

ಕಾಯ್ದೆ ಉಲ್ಲಂಘನೆ ಮಾಡಿದ 60 ಸಾವಿರ ಎಕರೆ ಜಮೀನನ್ನು ಸಕ್ರಮಗೊಳಿಸಿ ಲಕ್ಷಾಂತರ ಕೋಟಿ ರೂ ಅವ್ಯವಹಾರಕ್ಕೆ ಎಡೆ ಮಾಡಿದ್ದೀರಿ ಎಂದು ದೂರಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಕೋವಿಡ್‌ನಿಂದ ಎಲ್ಲ ವಲಯಗಳಲ್ಲಿ ಮೈನಸ್ ಇದೆ. ಆದರೆ, ರೈತರು ಮಾತ್ರ ಬೇಸಾಯ ನಿಲ್ಲಿಸಲ್ಲ. ಸರ್ಕಾರದ ಮಾಹಿತಿಯ ಪ್ರಕಾರವೇ ಈ ಬಾರಿ ಹೆಚ್ಚು ಬಿತ್ತನೆಯಾಗಿದೆ. ಹೀಗಾಗಿ ಕೃಷಿ ವಲಯವನ್ನು ಲಘುವಾಗಿ ಪರಿಗಣಿಸಬಾರದು. ಕಾಯ್ದೆಯ ಕೆಲವು ನ್ಯೂನತೆಗಳಸನ್ನು ಸರಿಪಡಿಸದೆ ವಿಧೇಯಕ ತಂದರೆ ಉಪಯೋಗ ಆಗುವುದಿಲ್ಲ. ಸ್ವತಃ ನಾನೇ ಸಮಸ್ಯೆಯನ್ನು (5ನೇ ಪುಟಕ್ಕೆ)

## ನಗರದ ಖಾಸಗಿ ಆಸ್ಪತ್ರೆಗಳಿಗೆ ಡಿಸಿ ದಿಢೀರ್ ಭೇಟಿ-ಪರಿಶೀಲನೆ



ದಾವಣಗೆರೆ,ಸೆ.26- ನಗರದ ಹಲವಾರು ಖಾಸಗಿ ಆಸ್ಪತ್ರೆಗಳಿಗೆ ಇಂದು ಬೆಳಿಗ್ಗೆ ದಿಢೀರ್ ಭೇಟಿ ನೀಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಆಸ್ಪತ್ರೆಗಳಲ್ಲಿನ ಸ್ವಚ್ಛತೆ, ರೋಗಿಗಳ ತಪಾಸಣೆ ಮತ್ತಿತರೆ ಕುರಿತಂತೆ ಪರಿಶೀಲನೆ ನಡೆಸಿದರು.

ಕೊರೊನಾ ವೈರಸ್ ಸೋಂಕು ಹಿನ್ನೆಲೆಯಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಭೇಟಿಯಿತ್ತ ಅವರು, ವೈದ್ಯರು, ಶುಶ್ರೂಷಕರು, ಸಿಬ್ಬಂದಿ ವರ್ಗದವರು ಮತ್ತು ರೋಗಿಗಳನ್ನು ಮಾತನಾಡಿಸಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ತಿಳಿವಳಿಕೆ ನೀಡಿದರು.

ಸಿಟಿ ಮೆಡಿಕಲ್ ಸೆಂಟರ್, ಆರೈಕೆ ಆಸ್ಪತ್ರೆ, ಸುಕ್ಷೇಮ ಆಸ್ಪತ್ರೆ, ಆಶ್ರಯ ಆಸ್ಪತ್ರೆ, ಸನ್ ಶೈನ್ ಆಸ್ಪತ್ರೆ, ಸೌಖ್ಯದಾ ಆಸ್ಪತ್ರೆ, ಸಿಟಿ (5ನೇ ಪುಟಕ್ಕೆ)

## ಎಪಿಎಂಸಿ ತಿದ್ದುಪಡಿ ರೈತರಿಗೆ ಮರಣ ಶಾಸನ - ಎಪಿಎಂಸಿ ಅಳಿವಿಗೆ ಕಾರಣ



**ಎಪಿಎಂಸಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್ ಆತಂಕ**

ದಾವಣಗೆರೆ, ಸೆ.26- ಕೇಂದ್ರ ಸಂಸತ್‌ನಲ್ಲಿ ಅನುಮೋದನೆ ಪಡೆದಿರುವ ಎಪಿಎಂಸಿ ತಿದ್ದುಪಡಿ ಕಾಯ್ದೆಯು ರೈತರಿಗೆ ಮರಣ ಶಾಸನ ಮತ್ತು ಎಪಿಎಂಸಿಗಳ ಅಳಿವಿಗೆ ಕಾರಣವಾಗಲಿದೆ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್ ಆತಂಕ ವ್ಯಕ್ತಪಡಿಸಿದರು.

ಕೃಷಿ ಉತ್ಪನ್ನಗಳ ಮೇಲಿನ ನಿಯಂತ್ರಣವನ್ನು ಬಿಟ್ಟುಕೊಟ್ಟು ಎಪಿಎಂಸಿಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಿ ರೈತರನ್ನು ಜೀತದಾಳಾಗಿಸುವ ಹುನ್ನಾರ ಈ ತಿದ್ದುಪಡಿ ಹಿಂದೆ ಅಡಗಿದೆ. ರೈತರಿಗೆ ಈ ತಿದ್ದುಪಡಿಯಿಂದ ಯಾವುದೇ ರೀತಿಯಲ್ಲಿ ನ್ಯಾಯ ಸಿಗುವುದಿಲ್ಲ. ಹಣದ ಭದ್ರತೆಯಿಲ್ಲ. ಮೋಸ ಮಾಡುವ ಹುನ್ನಾರವಿದೆ ಎಂದು ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಈ ಮಸೂದೆಯಿಂದಾಗುವ ತೊಂದರೆಗಳ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದ್ದೇವೆ. ಎಪಿಎಂಸಿ ಕಾಯ್ದೆ ತಿದ್ದುಪಡಿ ವಿರೋಧಿಸಿ ಹೈಕೋರ್ಟ್‌ನಲ್ಲಿ ಚಿಕ್ಕಬಳ್ಳಾಪುರ ರೈತ ಡಿ.ಎಲ್. ನಾಗರಾಜ್ ಎಂಬುವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಮಧ್ಯ ಕರ್ನಾಟಕ ದಾವಣಗೆರೆಯಲ್ಲಿ ಎಪಿಎಂಸಿ ನಿರ್ದೇಶಕರು ಮತ್ತು ಉತ್ತರ ಕರ್ನಾಟಕದಲ್ಲಿ ರೈತರು ನ್ಯಾಯಾಂಗ ಹೋರಾಟ ನಡೆಸಲಿದ್ದಾರೆ ಎಂದು ತಿಳಿಸಿದರು.

ಈಗಾಗಲೇ ರಾಜ್ಯದಲ್ಲಿ 50-60 ಎಪಿಎಂಸಿಗಳು ಮುಚ್ಚಿವೆ. ಸಂಪೂರ್ಣವಾಗಿ ಎಪಿಎಂಸಿಗಳನ್ನು ಮುಚ್ಚುವ (6ನೇ ಪುಟಕ್ಕೆ)

## ಸಚಿವ ಸಿ.ಟಿ. ರವಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

### ತೇಜಸ್ವಿ ಸೂರ್ಯ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ





ಬೆಂಗಳೂರು, ಸೆ.26- ಪ್ರವಾಸೋದ್ಯಮ ಸಚಿವ ಸಿ.ಟಿ.ರವಿ ಅವರು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸದಸ್ಯ ತೇಜಸ್ವಿ ಸೂರ್ಯ ಅವರು, ಬಿಜೆಪಿಯ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷರಾಗಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು, ರಾಷ್ಟ್ರೀಯ ಬಿಜೆಪಿಯನ್ನು ಪುನರ್‌ರಚಿಸಿದ್ದು, ಕರ್ನಾಟಕಕ್ಕೆ ಎರಡು ದೊಡ್ಡ ಉಡುಗೊರೆಗಳನ್ನು ನೀಡಿದ್ದಾರೆ.

ಅನಂತ್‌ಕುಮಾರ್ ನಿಧನದ ನಂತರ ರಾಷ್ಟ್ರೀಯ ಮಟ್ಟದಲ್ಲಿ ಇಂಥ ದೊಡ್ಡ ಹುದ್ದೆ ರಾಜ್ಯಕ್ಕೆ ದೊರೆತಿರಲಿಲ್ಲ. ಸಿ.ಟಿ.ರವಿ ಅವರಿಗೆ ಈ ಹುದ್ದೆಯ ಜತೆಗೆ ದಕ್ಷಿಣ ಭಾರತದ ಯಾವುದಾದರೂ ಒಂದು ರಾಜ್ಯದ ಉಸ್ತುವಾರಿ ವಹಿಸಲಿದ್ದಾರೆ. ಈಗಾಗಲೇ ತಮಿಳುನಾಡಿನಲ್ಲಿ ಚುನಾವಣಾ ಉಸ್ತುವಾರಿ ನೋಡಿಕೊಂಡಿದ್ದರು.

ರವಿ ಅವರಿಗೆ ರಾಷ್ಟ್ರಮಟ್ಟದಲ್ಲಿ ಇಂಥ ದೊಡ್ಡ ಹುದ್ದೆ ಸಿಕ್ಕಿರುವುದರಿಂದ ಪಕ್ಷ ಸಚಿವ ಸ್ಥಾನದಲ್ಲಿ ಇವರನ್ನು ಮುಂದುವರೆಸುತ್ತದೆಯೋ ಅಥವಾ (5ನೇ ಪುಟಕ್ಕೆ)



## ಕೋವಿಡ್ ಜಾಗೃತಿ ಟ್ಯಾಬ್ಲೋಗೆ ಜಿಲ್ಲಾಧಿಕಾರಿ ಚಾಲನೆ

ದಾವಣಗೆರೆ, ಸೆ.26- ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಜಿಲ್ಲೆಯಾದ್ಯಂತ ಕೊರೊನಾ ಬಗ್ಗೆ ಜಾಗೃತಿ ಮೂಡಿಸುವ ಕೋವಿಡ್-19 ಜಾಗೃತಿ ಟ್ಯಾಬ್ಲೋ ವಾಹನಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಇಂದು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಆರ್‌ಸಿಹೆಚ್‌ಓ ಡಾ. ಮೀನಾಕ್ಷಿ, ಡಾ. ಸುರೇಶ್ ಬಾರ್ಕಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಿ. ಅಶೋಕ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಆಕ್ಸಿಜನ್ ಬೆಲೆ ಮೇಲೆ ನಿಯಂತ್ರಣ

**ಕೊರೊನಾ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಕ್ರಮ**

ನವದೆಹಲಿ, ಸೆ. 26 - ಕೊರೊನಾ ಸಂದರ್ಭದಲ್ಲಿ ವೈದ್ಯಕೀಯ ಆಕ್ಸಿಜನ್ ಸಮರ್ಪಕ ಬೆಲೆಗೆ ಲಭ್ಯವಾಗುವ ಸಲುವಾಗಿ ಔಷಧ ಬೆಲೆ ನಿಯಂತ್ರಕವಾದ ಎನ್‌ಪಿಪಿಎ, ಆಕ್ಸಿಜನ್ ಸಿಲಿಂಡರ್ ಹಾಗೂ ದ್ರವ ಔಷಧ ಆಕ್ಸಿಜನ್ ಬೆಲೆಗಳ ಮೇಲೆ ಆರು ತಿಂಗಳು ನಿರ್ಬಂಧ ಹೇರಿದೆ.

ಕೊರೊನಾ ಹಿನ್ನೆಲೆಯಲ್ಲಿ ವೈದ್ಯಕೀಯ ಆಕ್ಸಿಜನ್ ಬೇಡಿಕೆ ದಿನಕ್ಕೆ 750 ಮೆಟ್ರಿಕ್ ಟನ್‌ನಿಂದ 2,800 ಮೆಟ್ರಿಕ್ ಟನ್‌ಗೆ ನಾಲ್ಕು ಪಟ್ಟು ಹೆಚ್ಚಾಗಿದೆ ಎಂದು ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಆಕ್ಸಿಜನ್ ಲಭ್ಯತೆ ಹಾಗೂ ಅದರ ಬೆಲೆಯ ಮೇಲೆ ಕೇಂದ್ರ ಸರ್ಕಾರ ಸಶಕ್ತ ಸಮಿತಿ ನಿರಂತರವಾಗಿ ನಿಗಾ ವಹಿಸುತ್ತಾ ಬಂದಿದೆ. ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರ (ಎನ್‌ಪಿಪಿಎ) (5ನೇ ಪುಟಕ್ಕೆ)

## ನೂತನ ಶಿಕ್ಷಣ ನೀತಿಯಿಂದ ಖಾಸಗೀಕರಣ, ಅಸಮಾನತೆ

### ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ನೀತಿ ಬಗ್ಗೆ ಮರುಚಿಂತನೆ ಬೇಕಿದೆ : ನ್ಯಾ. ನಾಗಮೋಹನ್‌ದಾಸ್

ದಾವಣಗೆರೆ, ಸೆ. 26 - ಕೇಂದ್ರ ಸರ್ಕಾರ ರೂಪಿಸಿರುವ ನೂತನ ಶಿಕ್ಷಣ ನೀತಿಯಿಂದ ಅಸಮಾನತೆ, ಖಾಸಗೀಕರಣ, ವರ್ಗಭೇದ ಹೆಚ್ಚಾಗಲಿದೆಯೇ ಹೊರತು, ಕಡಿಮೆಯಾಗುವುದಿಲ್ಲ. ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ಈ ನೀತಿಯ ಬಗ್ಗೆ ಮರು ಚಿಂತನೆಯ ಅಗತ್ಯವಿದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅಭಿಪ್ರಾಯ ಪಟ್ಟಿದ್ದಾರೆ.

ಬಂಡಾಯ ಸಾಹಿತ್ಯ ಸಂಘಟನೆಯ ವತಿಯಿಂದ ಆನ್‌ಲೈನ್ ಮೂಲಕ ಇಂದು ಆಯೋಜಿಸಲಾಗಿದ್ದ 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ : ಒಳನೋಟ' ವಿಷಯ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೂತನ ಶಿಕ್ಷಣ ನೀತಿಯಿಂದ ಖಾಸಗಿ ಸಂಸ್ಥೆಗಳು ಬೆಳೆಯಲು ಅವಕಾಶವಿದ್ದು, ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಪೆಟ್ಟು ಬೀಳಲಿದೆ. ಖಾಸಗಿಯವರಿಗೆ ಶಿಕ್ಷಣ ಒಪ್ಪಿಸುವುದು ಸಂವಿಧಾನ ಬಾಹಿರ ಎಂದವರು ಹೇಳಿದರು.

ಶಿಕ್ಷಣವು ಸಂವಿಧಾನದ ಸಹವರ್ತಿ ಪಟ್ಟಿಯಲ್ಲಿದೆ. ಆದರೆ, ರಾಜ್ಯಗಳ ಜೊತೆ ಚರ್ಚೆ ನಡೆಸದೇ, ಅವುಗಳ ಅಧಿಕಾರ ಮೊಟಕುಗೊಳಿಸಿ ನೂತನ ಶಿಕ್ಷಣ ನೀತಿ ಜಾರಿಗೆ ತಂದಿರುವುದು ಒಕ್ಕೂಟ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವಕ್ಕೆ ಮಾರಕ ಎಂದು ತಿಳಿಸಿದರು.

ನೂತನ ಶಿಕ್ಷಣ ನೀತಿಯ ಬಗ್ಗೆ ರಾಜ್ಯಗಳ ಜೊತೆ ಸಮಾಲೋಚನೆ ನಡೆಸಿಲ್ಲ. ಶಿಕ್ಷಣ ತಜ್ಞರ ಜೊತೆ ಸಮಾಲೋಚನೆ ನಡೆಸದೇ, ಸಂಸತ್ತಿನಲ್ಲಿ ಚರ್ಚೆ ನಡೆಸದೇ ಜಾರಿಗೆ ತರಲಾಗಿದೆ. ಇದು ಸಂವಿಧಾನದ ಆಶಯ ಹಾಗೂ ಸಾಮಾಜಿಕ ನ್ಯಾಯ ಧಿಕ್ಕರಿಸಿದಂತೆ ಎಂದವರು ತಿಳಿಸಿದರು.

ನೂತನ ಶಿಕ್ಷಣ ನೀತಿಗೆ ಅಗತ್ಯ ಹಣ ಹಾಗೂ ಸಂಪನ್ಮೂಲ ಹೇಗೆ ಒದಗಿಸಲಾಗುವುದು ಎಂಬ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಶೇ.6ರಷ್ಟು ಜಿ.ಡಿ.ಪಿ.ಯನ್ನು ಶಿಕ್ಷಣಕ್ಕೆ ಒದಗಿಸಬೇಕಿದೆ. ಅದರ ಇಚ್ಛಾಶಕ್ತಿ ಹಾಗೂ ಹಣಕಾಸು ವ್ಯವಸ್ಥೆ ಶಿಕ್ಷಣ ನೀತಿಯಲ್ಲಿ ಇಲ್ಲ ಎಂದು ನ್ಯಾಯಮೂರ್ತಿ ನಾಗಮೋಹನ್ ದಾಸ್ ಹೇಳಿದರು.

ಕಾಲೇಜುಗಳ ಶೇ.70ರಷ್ಟು ಹುದ್ದೆಗಳಲ್ಲಿ ಗುತ್ತಿಗೆ, ತಾತ್ಕಾಲಿಕ ಹಾಗೂ ಅತಿಥಿ ಉಪನ್ಯಾಸಕರಿದ್ದಾರೆ. ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ, ಇವರೆಲ್ಲರನ್ನು ಅತಂತ್ರದಲ್ಲಿಟ್ಟು ಅರ್ಧ ಹೊಟ್ಟೆ ತುಂಬಿಸಿ ಗುಣಾತ್ಮಕ ಶಿಕ್ಷಣ ಜಾರಿಗೆ ತರಲು ಸಾಧ್ಯವಿಲ್ಲ ಎಂದವರು ಹೇಳಿದರು.

ಶಿಕ್ಷಣ ನೀತಿಯ ಬಗ್ಗೆ ಮರು ಚಿಂತನೆ, ಪರಿಷ್ಕರಣೆಯ ಅಗತ್ಯವಿದೆ. ಪ್ರಜಾಸತ್ತಾತ್ಮಕ ಚರ್ಚೆಯಾಗಬೇಕಿದೆ. ಇದರಿಂದ ದೇಶಕ್ಕೆ, ಸಮಾಜಕ್ಕೆ ಒಳ್ಳೆಯದಾಗುತ್ತದೆ. ದೇಶ ಅಭಿವೃದ್ಧಿ ಪಥದತ್ತ ಸಾಗುತ್ತದೆ ಎಂದು ನಾಗಮೋಹನ್ ದಾಸ್ ಅಭಿಪ್ರಾಯ ಪಟ್ಟರು.

ತುಮಕೂರಿನ ಚಿಂತಕ ಶ್ರೀಪಾದ್ ಭಟ್ ಮಾತನಾಡಿ, ನೂತನ ಶಿಕ್ಷಣ ನೀತಿಯನ್ನು ಒಂದೇ ದಿನದಲ್ಲಿ ಜಾರಿಗೆ ತರಲಾಗದು. ಇದಕ್ಕೆ ಬೇಕಾದ ಸಾಕಷ್ಟು ಸಿದ್ಧತೆಗಳಿಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಆಕ್ಷೇಪಿಸಿದರು.

ಬಹುತೇಕ ಬೆಂಗಳೂರಿನ ಬಲಪಂಥೀಯ ನೀತಿಯವರ ಜೊತೆ ಸಮಾಲೋಚನೆ ನಡೆಸುವುದಕ್ಕೆ ಸೀಮಿತವಾಗಿ ನೂತನ ಶಿಕ್ಷಣ ನೀತಿ ರಚಿಸಲಾಗಿದೆ ಎಂದೂ ಅವರು ಆರೋಪಿಸಿದರು.

ಇಪ್ಟಾ ಕಲಾವಿದರಾದ ಷಣ್ಮುಖ ಸ್ವಾಮಿ ಸಂಗಡಿಗರು ಸ್ವಾಗತ ಗೀತೆ ಹಾಡಿದರು. ಬಂಡಾಯ ಸಾಹಿತ್ಯ ಸಂಘಟನೆಯ ಜಿಲ್ಲಾ ಸಂಚಾಲಕರೂ ಆದ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಸ್ವಾಗತಿಸಿದರು.

ಜಿಲ್ಲಾ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಚಿಂತಕ ಪುರುಷೋತ್ತಮ ಬಿಳಿಮಲೆ ಮತ್ತಿತರರು ಉಪಸ್ಥಿತರಿದ್ದರು.


## ಬಾಳೆಹೊಲದ ಬಸವರಾಜ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 10ನೇ ಮೇನ್, 3ನೇ ಕ್ರಾಸ್ ವಾಸಿ, ಸ್ವಾತಂತ್ರ್ಯ ಹೋರಾಟಗಾರರಾದ ದಿ|| ಬಾಳೆಹೊಲದ ಮರುಳಸಿದ್ದಪ್ಪ ಅವರ ಹಿರಿಯ ಪುತ್ರರೂ, ಜಿಲ್ಲಾ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಮಾರಾಟಗಾರರ ಸಂಘದ ಕಾರ್ಯದರ್ಶಿಗಳೂ, ಶಿವ ಸಹಕಾರಿ ಬ್ಯಾಂಕ್ ಮಾಜಿ ನಿರ್ದೇಶಕರೂ ಆದ **ಶ್ರೀ ಬಾಳೆಹೊಲದ ಬಸವರಾಜ** ಅವರು

ದಿನಾಂಕ 26.09.2020ರ ಶನಿವಾರ ಮಧ್ಯಾಹ್ನ 12.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 56 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶನಿವಾರ ಆವರಗೊಳ್ಳ ಗ್ರಾಮದ ಜಮೀನಿನಲ್ಲಿ ನೆರವೇರಿತು.

ಇಂತಿ ದುಃಖತಪ್ತರು,

ತಾಯಿ : ಶ್ರೀಮತಿ ಗುರುಸಿದ್ದಮ್ಮ ಮರುಳಸಿದ್ದಪ್ಪ ಮತ್ತು ಕುಟುಂಬ ವರ್ಗ

ಮೆ|| ಬಾಳೆಹೊಲದ ಮರುಳಸಿದ್ದಪ್ಪ ಅಂಡ್ ಸನ್ಸ್, ಎಪಿಎಂಸಿ 'ಡಿ' ಬ್ಲಾಕ್, ದಾವಣಗೆರೆ.

ಮೆ|| ಬಾಳೆಹೊಲದ ಆಗ್ರೋ ಏಜೆನ್ಸೀಸ್, ಮಹಾವೀರ ರೋಡ್, ದಾವಣಗೆರೆ.

ಮೊ. : 98443 47671, 98441 54666


## ಕೃಷ್ಣ ಜನ್ಮಸ್ಥಳದಲ್ಲಿ ಮಸೀದಿ ವಿವಾದ

### ಮಸೀದಿ ತೆರವುಗೊಳಿಸಲು ಕೋರ್ಟ್‌ನಲ್ಲಿ ಅರ್ಜಿ

ಮಥುರಾ, ಸೆ. 26 – ಶ್ರೀಕೃಷ್ಣ ಜನಿಸಿದ ಸ್ಥಳ ಎಂದು ಹೇಳಲಾದ ಪ್ರದೇಶದಲ್ಲಿ ಔರಂಗ್‌ಜೇಬ್ ನಿರ್ಮಿಸಿರುವ ಮಸೂದಿ ತೆರವುಗೊಳಿಸಬೇಕೆಂದು ಮಥುರಾ ಸಿವಿಲ್ ನ್ಯಾಯಾಲಯದಲ್ಲಿ ಹಿಂದೂಗಳ ಸಂಘಟನೆಯೊಂದು ಅರ್ಜಿ ದಾಖಲಿಸಿದೆ. 13.37 ಎಕರೆ ಪ್ರದೇಶದ ಕೇಶವ ದೇವ ದೇವಾಲಯದ ಆವರಣದಲ್ಲಿ ಮಸೀದಿ ಇದೆ. ಮಥುರಾ ಹಿರಿಯ ಸಿವಿಲ್ ನ್ಯಾಯಮೂರ್ತಿ ಛಾಯಾ ಶರ್ಮಾ ಅವರ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಲಾಗಿದೆ.

ದೇವಾಲಯದ ಆವರಣದಲ್ಲಿ ಮಸೀದಿ ಇರಬೇಕೆಂದು ಶ್ರೀ ಕೃಷ್ಣ ಜನ್ಮಸ್ಥಾನ ಸೇವಾ ಸಂಸ್ಥಾನ ಹಾಗೂ ಶಾಹಿ ಈದ್ಗಾ ನಿರ್ವಹಣಾ ಸಮಿತಿ ನಡುವೆ 1968ರಲ್ಲಿ ಆದ ಒಪ್ಪಂದವನ್ನು ಊರ್ಜಿತಗೊಳಿಸಿ ಮಥುರಾ ನ್ಯಾಯಾಲಯ ಆದೇಶ ಹೊರಡಿಸಿರುವುದನ್ನು ರದ್ದುಗೊಳಿಸಬೇಕೆಂದು ಕೇಳಲಾಗಿದೆ.

ಲಖ್ನೌ ನಿವಾಸಿ ರಂಜನಾ ಅಗ್ನಿಹೋತ್ರಿ ಹಾಗೂ ಇತರೆ ಐವರು ಈ ಬಗ್ಗೆ ಅರ್ಜಿ ದಾಖಲಿಸಿದ್ದಾರೆ. 51 ವರ್ಷದ ಅಗ್ನಿಹೋತ್ರಿ, ತಾವು ದೇವಾಲಯದ ದೇವರಾದ ಶ್ರೀ ಕೃಷ್ಣ ವಿರಾಜಮಾನ್ ಹಾಗೂ ಆಸ್ಥಾನ ಶ್ರೀಕೃಷ್ಣ ಜನ್ಮ ಭೂಮಿಯ ಕೇಶವ ದೇವರ ಗೆಳೆಯನೆಂದು ಭಾವಿಸಿ ಅರ್ಜಿ ದಾಖಲಿಸಿಕೊಳ್ಳಬೇಕೆಂದು ಅರ್ಜಿಯಲ್ಲಿ ಕೋರಿದ್ದಾರೆ.

ಉತ್ತರ ಪ್ರದೇಶದ ಸುನ್ನಿ ಕೇಂದ್ರ ವಕ್ಫ್ ಮಂಡಳಿ, ಮಸೀದಿಯನ್ನು ನಿರ್ವಹಿಸುವ ಸಮಿತಿ, ಮಥುರಾದ ಶ್ರೀ ಕೃಷ್ಣ ಜನ್ಮಭೂಮಿ ಟ್ರಸ್ಟ್ ಹಾಗೂ ಶ್ರೀ ಕೃಷ್ಣ ಜನ್ಮ ಸ್ಥಾನ ಸೇವಾ ಸಂಸ್ಥಾನಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ದೇವಸ್ಥಾನದ ಎರಡು ಸಮಿತಿಗಳು ದೇವರ ಹಿತ ಕಾಪಾಡಲು ವಿಫಲವಾಗಿರುವ ಕಾರಣ ಪ್ರತಿವಾದಿಗಳಾಗಿ ಮಾಡಬೇಕೆಂದು ಕೋರಲಾಗಿದೆ.

ಇಷ್ಟು ಸಮಯದ ನಂತರ ಅರ್ಜಿ ದಾಖಲಿಸಿರುವುದಕ್ಕೆ ಉತ್ತರಿಸಿರುವ ಅರ್ಜಿದಾರರು, ಕಳೆದ ಜನವರಿ 15, 2020ರಂದು ದೇವಾಲಯಕ್ಕೆ ಭೇಟಿ ನೀಡಿದ್ದೆ. ಆಗ ದೇವಾಲಯದ ಆವರಣದಲ್ಲಿ ಮಸೀದಿ ಇರುವುದು ನೋಡಿ ಆಘಾತವಾಯಿತು. ಈ ಕಾರಣಕ್ಕೆ ನ್ಯಾಯಾಲಯಕ್ಕೆ ಬಂದಿರುವುದಾಗಿ ಹೇಳಿದ್ದಾರೆ.


## ಶ್ರೀ ರಾಜೀವ್ ಎಲ್.ಕೆ. ನಿಧನ



ದಾವಣಗೆರೆ ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹಿಂಭಾಗದ ರಸ್ತೆ, ಅಮ್ಮ ನಿಲಯದ ವಾಸಿ

ಎಲ್.ಕೃಷ್ಣಮೂರ್ತಿ ಇವರ ಪುತ್ರ

**ಶ್ರೀ ರಾಜೀವ್ ಎಲ್.ಕೆ.**

ಇವರು ದಿನಾಂಕ 26.09.2020 ರ ಶನಿವಾರ ಮಧ್ಯಾಹ್ನ 1.40 ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 58 ವರ್ಷ ವಯಸ್ಸಾಗಿತ್ತು. ತಂದೆ ಕೃಷ್ಣಮೂರ್ತಿ, ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದು ಮೃತರ ಅಂತ್ಯಕ್ರಿಯೆಯನ್ನು 26.09.2020 ರಂದು ಸಂಜೆ 5.30ಕ್ಕೆ ದಾವಣಗೆರೆಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತರು

**ಲಿಂಗಪಲ್ಲಿ ವಂಶಸ್ಥರು**

ಅಮ್ಮ ನಿಲಯ, ಆಂಜನೇಯ ದೇವಸ್ಥಾನದ ಹಿಂಭಾಗದ ರಸ್ತೆ, ಆಂಜನೇಯ ಬಡಾವಣೆ, ದಾವಣಗೆರೆ.

94814 18236, 97402 20332, 95915 93314

## ಏಳನೇ ವರ್ಷದ ಪುಣ್ಯಸ್ಮರಣೆ




**ದಿ|| ಶ್ರೀ ಡಿ.ಎನ್. ಶೇಖರಪ್ಪ ಚಿಕ್ಕನಹಳ್ಳಿ**

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

ಶ್ರೀಮತಿ ಗಂಗಮ್ಮ ಶೇಖರಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

# ಭಾವಪೂರ್ಣ ಶ್ರದ್ಧಾಂಜಲಿ



**ದಿನಾಂಕ 26.9.2020ರಂದು ನಿಧನರಾದ ದಾವಣಗೆರೆ ಜಿಲ್ಲಾ ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕ ಮಾರಾಟಗಾರರ ಸಂಘದ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳೂ, ಹಾಲಿ ಉಪಾಧ್ಯಕ್ಷರು, ಶಿವ ಸಹಕಾರಿ ಬ್ಯಾಂಕಿನ ಮಾಜಿ ನಿರ್ದೇಶಕರು, ಸರಳ ಸಜ್ಜನಿಕೆಯ - ಆತ್ಮೀಯ ಸ್ನೇಹಿತರಾದ**

**ಬಾಳೆಹೊಲದ ಆಗ್ರೋ ಏಜೆನ್ಸೀಸ್ ಮಾಲೀಕರಾದ**

## ಶ್ರೀ ಬಾಳೆಹೊಲದ ಬಸವರಾಜ್

**ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.**

**ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ದಯಾಮಯನಾದ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.**

- **ಶಿವಮೂರ್ತಿ ಅಗಸನಕಟ್ಟೆ** (ಪ್ರಧಾನರು), ಶ್ರೀ ಗುರು ಬಸವ ಆಗ್ರೋ ಏಜೆನ್ಸೀಸ್
- **ಧನಂಜಯ ಕಡ್ಲೇಬಾಳ್**, ವೆಂಕಟಸಾಯಿ ಆಗ್ರೋ ಏಜೆನ್ಸೀಸ್
- **ಲಕ್ಷ್ಮಿ ನಾರಾಯಣ ಶೆಟ್ಟಿ**, ವಾಸವಿ ಸೀಡ್ಸ್ ಸೆಂಟರ್
- **ಅಂಗಡಿ ಉಮೇಶ್**, ನಿರ್ಮಲಾ ಆಗ್ರೋ ಏಜೆನ್ಸೀಸ್
- **ಶಿವಕುಮಾರ್ ಮಳಲ್ಕೆರೆ**, ಮಳಲ್ಕೆರೆ ಆಗ್ರೋ ಏಜೆನ್ಸೀಸ್
- **ಆರ್.ಜಿ. ದತ್ತರಾಜ್**, ಗುರುದತ್ತ ಎಂಟರ್ ಪ್ರೈಸಸ್
- **ಸಂಕಣ್ಣ ಚಿಕ್ಕನಹಳ್ಳಿ**, ಪ್ರಶಾಂತ್ ಆಗ್ರೋ ಫರ್ಟಿಲೈಸರ್ಸ್
- **ಬಸವರಾಜಪ್ಪ ಆನೆಕೊಂಡ**, ವೆಂಕಟೇಶ್ವರ ಆಗ್ರೋ ಏಜೆನ್ಸೀಸ್
- **ವೇದಮೂರ್ತಿ**, ತರಳಬಾಳು ಆಗ್ರೋ ಏಜೆನ್ಸೀಸ್
- **ಶಿವಣ್ಣ**, ವಿಜಯಲಕ್ಷ್ಮಿ ಆಗ್ರೋ ಸೆಂಟರ್
- **ಯತಿರಾಜ್**, ಶ್ರೀನಿಧಿ ಸೀಡ್ಸ್ ಸೆಂಟರ್
- **ಸೋಮಶೇಖರ್**, ಶ್ರೀನಿವಾಸ್ ಆಗ್ರೋ ಟ್ರೇಡರ್ಸ್
- **ಕಲ್ಲೇಶ್**, ಕಾವೇರಿ ಸೀಡ್ಸ್ ಕಂಪನಿ
- **ಕೆ.ಪಿ. ಚನ್ನಬಬಸಪ್ಪ ಗೋಣಿವಾಡ**, ಶ್ರೀ ಮಾರುತಿ ಟ್ರೇಡರ್ಸ್
- **ಶ್ರೀಕಾಂತ್**, ಭೂಮಿಕಾ ಆಗ್ರೋ ಫರ್ಟಿಲೈಸರ್ಸ್
- **ಬಸವರಾಜ್ (ಪಾಪಣ್ಣ)**, ಮಲ್ಲಿಕಾರ್ಜುನ ಫರ್ಟಿಲೈಸರ್ಸ್
- **ಬಿ.ಎನ್. ಸುರೇಶ್**, ಸಿದ್ದೇಶ್ವರ ಫರ್ಟಿಲೈಸರ್ಸ್, ಶಾಮನೂರು
- **ಹನುಮಂತಗೌಡ**, ಬ್ರಹ್ಮಲಿಂಗೇಶ್ವರ ಫರ್ಟಿಲೈಸರ್ಸ್
- **ನಟರಾಜ್**, ವಿನಾಯಕ ಆಗ್ರೋ ಏಜೆನ್ಸೀಸ್
- **ಕಿಶೋರ್**, ಕಿಶೋರ್ ಆಗ್ರೋ ಫರ್ಟಿಲೈಸರ್ಸ್
- **ನಾಗರಾಜ್ ಲೋಕಿಕೆರೆ**, ರೇಣುಕಾ ಆಗ್ರೋ ಟ್ರೇಡರ್ಸ್
- **ಉಮಾಪತಯ್ಯ**, ಗುರು ರೇಣುಕಾ ಆಗ್ರೋ ಸೆಂಟರ್
- **ರವಿ ಅತ್ತಿಗೆರೆ**, ಶಿವಕುಮಾರ್ ರವಿ ಫರ್ಟಿಲೈಸರ್ಸ್
- **ಶಾಂತರಾಜ್**, ಮಂಜುನಾಥ ಆಗ್ರೋ ಸೆಂಟರ್
- **ಹೇಮರಾಜ್ ಸಿಂಗ್ರಿಹಳ್ಳಿ**, ಸಿಂಗ್ರಿಹಳ್ಳಿ ಆಗ್ರೋ ಫರ್ಟಿಲೈಸರ್ಸ್
- **ಕುಮಾರ್ ಪುಟಗನಾಳ್**, ಕುಮಾರ್ ಆಗ್ರೋ ಏಜೆನ್ಸೀಸ್
- **ಜಗದೀಶ್**, ಕಾವಲಹಳ್ಳಿ ಆಗ್ರೋ ಏಜೆನ್ಸೀಸ್
- **ಬೆಳವನೂರು ಸಿದ್ದೇಶ್ವರ**, ದಶರಥ ಫರ್ಟಿಲೈಸರ್ಸ್
- **ಕುಮಾರ್ ಬಾವಿಹಾಳ್**, ಶಿವಕುಮಾರ್ ಆಗ್ರೋ ಏಜೆನ್ಸೀಸ್
- **ಸಂತೋಷ್**, ಗಣೇಶ್ ಆಗ್ರೋ ಟ್ರೇಡರ್ಸ್
- **ರಾಜು**, ಭಾಗ್ಯಶ್ರೀ ಸೀಡ್ಸ್ ಸೆಂಟರ್
- **ದಾನಂ ಗೌಡ**, ಬಾಯರ್ ಸೀಡ್ಸ್ ಅಂಡ್ ಕೆಮಿಕಲ್ಸ್
- **ಬಲವಂತ್ - ಚಂದ್ರಕಾಂತ್**, ರಾಥೋಡ್ ಆಗ್ರೋ ಫರ್ಟಿಲೈಸರ್ಸ್
- **ರವಿಕುಮಾರ್ ಬಿ.ಎನ್.** ಯಶಸ್ವಿ ಎಂಟರ್ ಪ್ರೈಸಸ್
- **ವಿಜಯ್ ಮಳಲ್ಕೆರೆ**, ಸಿದ್ದೇಶ್ವರ ಆಗ್ರೋ ಏಜೆನ್ಸೀಸ್
- **ಗಿರೀಶ್ ಹೆಚ್.ಎ.**, ಬಾಲಾಜಿ ಆಗ್ರೋ ಏಜೆನ್ಸೀಸ್
- **ಲೋಹಿತಾಶ್ವ**, ತ್ಯಾವಣಗಿ, ರಂಗನಾಥ್ ಆಗ್ರೋ ಏಜನ್ಸೀಸ್
- **ದೇವಿ ನಾಗರಾಜ್**, ಜಯಲಕ್ಷ್ಮಿ ಆಗ್ರೋ ಏಜೆನ್ಸೀಸ್
- **ವಿಜಯಕುಮಾರ್**, ಎಂ. ಆರ್. ಆಗ್ರೋ ಏಜೆನ್ಸೀಸ್

✦ ✦ ✦ ✦ ✦

**ದಾವಣಗೆರೆ ಜಿಲ್ಲಾ ರಸಗೊಬ್ಬರ, ಬೀಜ, ಕೀಟನಾಶಕ ಮಾರಾಟ ಮಿತ್ರರು**

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.

## ದಿನಾಂಕ : 31.03.2020ರ ಲಾಭ-ನಷ್ಟ ಪತ್ರಿಕೆ

| 31.03.2019 ರಲ್ಲಿ ಇದ್ದಂತೆ ರೂ. ಪೈ. | ಖರ್ಚು | | 31.03.2020ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 34,62,97,296.00 | ಠೇವಣಿಗಳು ಮತ್ತು ಸಾಲಗಳ ಮೇಲೆ ಕೊಟ್ಟ ಬಡ್ಡಿ | 68,38,53,280.00 | 38,61,69,537.00 |
| | ಶಾಖೆಗಳ ಠೇವಣಿ ಮತ್ತು ಸಾಲಗಳ ಮೇಲಿನ ಬಡ್ಡಿ ಕಳೆದು (ಕಾಂಟ್ರಾ) | 29,76,83,743.00 | |
| 7,47,31,720.79 | ಸಂಬಳ, ಭತ್ಯೆ, ಭವಿಷ್ಯ ನಿಧಿ ಮತ್ತು ಸಿಬ್ಬಂದಿ ಗ್ರಾಚ್ಯುಟಿ | | 8,16,05,240.52 |
| 3,42,000.00 | ಆಡಳಿತ ಮಂಡಳಿ ಸದಸ್ಯರುಗಳ ಮತ್ತು ಸಮಿತಿಗಳ ಸದಸ್ಯರ ಫೀ ಮತ್ತು ಭತ್ಯೆಗಳು | | 4,05,000.00 |
| 90,88,744.34 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | | 98,02,125.27 |
| 92,65,836.00 | ಬೋನಸ್ ಮತ್ತು ಎಕ್ಸ್‌ಗ್ರೇಷಿಯ ಸಿಬ್ಬಂದಿಗೆ | | 1,09,34,596.00 |
| 4,79,988.00 | ಅಂಚೆ ಮತ್ತು ತಂತಿ ದೂರವಾಣಿ ಖರ್ಚು | | 5,04,968.00 |
| 1,05,000.00 | ಕಾನೂನು ಖರ್ಚುಗಳು | | 1,05,310.00 |
| 20,68,579.00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ವೆಚ್ಚ | | 22,45,146.00 |
| 1,00,86,843.77 | ಆಸ್ತಿಗಳ ಮೇಲಿನ ಸವಕಳಿ ಮತ್ತು ದುರಸ್ತಿ ಖರ್ಚು | | 1,16,19,861.35 |
| 15,00,617.80 | ಮುದ್ರಣ ಮತ್ತು ಲೇಖನ ಸಾಮಾಗ್ರಿಗಳು ಮತ್ತು ಪ್ರಚಾರ | | 9,24,106.16 |
| 57,28,565.00 | ಕರಡು ಸಾಲಗಳ ನಿಧಿಗೆ | | 58,27,731.00 |
| 8,96,429.00 | ಕರಡು ಸಾಲಗಳ ವಿಶೇಷ ನಿಧಿಗೆ | | 13,41,270.00 |
| 2,43,71,997.00 | ಆದಾಯ ತೆರಿಗೆಯ ಬಾಬ್ತು | | 2,46,43,934.00 |
| 56,43,429.00 | ಇತರೆ ಖರ್ಚುಗಳು | | 52,83,999.00 |
| 4,56,05,826.66 | ನಿವ್ವಳ ಲಾಭ | | 4,52,81,623.48 |
| **53,62,12,872.36** | **ಜುಮ್ಲಾ** | | 58,66,94,447.78 |

| 31.03.2019 ರಲ್ಲಿ ಇದ್ದಂತೆ ರೂ. ಪೈ. | ಆದಾಯ | | 31.03.2020 ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| **20,73,34,419-00** | ಬಡ್ಡಿ ಮತ್ತು ಸೋಡಿ | 52,86,95,433.62 | **23,10,11,690.62** |
| | ಶಾಖೆಗಳ ಠೇವಣಿ ಮತ್ತು ಸಾಲಗಳ ಮೇಲಿನ ಬಡ್ಡಿ ಕಳೆದು (ಕಾಂಟ್ರಾ) | 29,76,83,743.00 | |
| **20,56,070-99** | ದಲ್ಲಾಳಿ, ವಿನಿಮಯ ಮತ್ತು ರುಸುಂ (ವಿನಾಯಿತಿ ಮತ್ತು ಧರ್ಮದಿಂದ / ಬ್ಯಾಂಕೇತರ ಆಸ್ತಿ ಮಾರಾಟದಿಂದ ಬಂದ ಆದಾಯ ) | | **14,74,926.18** |
| **32,68,22,382-37** | ಇತರೆ ಜಮಾಗಳು | | **35,42,07,830.98** |
| 32,14,93,768-36 | ಸಂಚಯ ಮೇಲಿನ ಆದಾಯ | 33,92,07,990.00 | |
| 34,38,114-01 | ಇತರೆ ಜಮಾಗಳು | 48,69,590.98 | |
| 13,90,500-00 | ಲಾಕರ್ ಬಾಡಿಗೆ | 13,77,750.00 | |
| 5,00,000-00 | ಸೆಕ್ಯೂರಿಟಿಗಳ ಮಾರಾಟದಿಂದ ಬಂದ ಲಾಭ | 87,52,500.00 | |
| **53,62,12,872-36** | **ಜುಮ್ಲಾ** | | 58,66,94,447.78 |

## ದಿನಾಂಕ : 31.03.2020ರ ಅಢಾವೆ ಪತ್ರಿಕೆ

| 31.03.2019 ರಲ್ಲಿ ಇದ್ದಂತೆ ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31.03.2020 ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 11,96,78,950.00 | **ಷೇರು ಬಂಡವಾಳ** | | **12,65,98,950.00** |
| 11,96,78,950.00 | ಪಾವತಿಯಾದ ಷೇರು ಬಂಡವಾಳ | 12,65,98,950.00 | |
| 11,96,78,950.00 | ವ್ಯಕ್ತಿ ಮತ್ತು ಸಂಸ್ಥೆಗಳಿಂದ | 11,65,98,950.00 | |
| 96,84,92,863.54 | **ಆಪದ್ಧನ ಮತ್ತು ಇತರೆ ನಿಧಿಗಳು** | | **99,93,94,243.20** |
| 46,53,20,362.45 | ಮೀಸಲು ನಿಧಿ (ಆಪದ್ಧನ ನಿಧಿ) | 48,35,67,741.11 | |
| 5,52,81,656.70 | ಕಟ್ಟಡದ ನಿಧಿ | 5,57,81,656.70 | |
| 1,66,45,491.55 | ಲಾಭಾಂಶ ಸಮೀಕರಣ ನಿಧಿ | 1,66,45,491.55 | |
| 1,12,03,329.79 | ಸಾರ್ವಜನಿಕ ಒಳಿತು ನಿಧಿ | 1,15,38,329.79 | |
| 29,73,15,620.00 | ಕರಡು ಸಾಲಗಳ ನಿಧಿ | 30,31,43,351,00 | |
| 87,43,015.27 | ಪ್ರಮಾಣಿತ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ | 87,43,015.27 | |
| 2,67,74,369.78 | ಸಿಬ್ಬಂದಿ ಕ್ಷೇಮ ನಿಧಿ | 2,72,74,369.78 | |
| 3,46,05,200.00 | ಗುಂತಾಯಿಸಿದ ಹಣದ ಸವಕಳಿ ನಿಧಿ | 3,51,05,200.00 | |
| 3,59,32,000.00 | ಗುಂತಾಯಿಸಿದ ಹಣದ ಏರಿಳಿತ ನಿಧಿ | 3,69,32,000.00 | |
| 1,36,21,818.00 | ಕರಡು ಸಾಲಗಳ ವಿಶೇಷ ನಿಧಿ | 1,49,63,088.00 | |
| 30,50,000.00 | ಸುವರ್ಣ ಮಹೋತ್ಸವ ನಿಧಿ | 57,00,000.00 | |
| 558,89,82,722.81 | **ಠೇವಣಿಗಳು ಮತ್ತು ಇತರೆ ಖಾತೆಗಳು** | | **680,70,64,717.06** |
| 367,51,63,699.72 | ಮುದ್ದತಿ ಠೇವಣಿಗಳು | 429,60,11,807.72 | |
| 367,33,04,699.72 | ವ್ಯಕ್ತಿಗಳಿಂದ | 429,36,52,807.72 | |
| 18,59.000.00 | ಸೊಸೈಟಿಗಳಿಂದ | 23,59,000.00 | |
| 168,74,29.413.72 | **ಉಳಿತಾಯ ಠೇವಣಿಗಳು** | 224,77,47,291.03 | |
| 168,52,59,623.73 | ವ್ಯಕ್ತಿಗಳಿಂದ | 224,73,13,384.43 | |
| 21,69,789.99 | ಸೊಸೈಟಿಗಳಿಂದ | 4,33,906.60 | |
| 22,63,89,609.37 | **ಚಾಲ್ತಿ ಠೇವಣಿಗಳು** | 26,33.05,618.31 | |
| 21,43,29.891-35 | ವ್ಯಕ್ತಿಗಳಿಂದ | 25,41,47,663.22 | |
| 1,20,59,718-02 | ಸೊಸೈಟಿಗಳಿಂದ | 91,57,955.09 | |
| | **ಸಾಲಗಳು** | | |
| | **ರಿಸರ್ವ್ ಬ್ಯಾಂಕ್, ರಾಜ್ಯ ಮತ್ತು ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕ್‌ಗಳಿಂದ** | | |
| 28,78,992.00 | ಕೊಡಬೇಕಾಗಿರುವ ಬಡ್ಡಿ (ಠೇವಣಿಗಳ ಮೇಲೆ) | | **28,04,274.00** |
| 17,36,64,484.11 | ಕಟ್‌ಬಾಕಿ ಬಡ್ಡಿ ಮೀಸಲು | | **19,71,27,415.30** |
| | ಸಾಲಗಳ ಮೇಲೆ (ಎದುರು ತೋರಿಸಿದಂತೆ) | | |
| 3,10,93,722.41 | **ಇತರೆ ಹೊಣೆಗಾರಿಕೆಗಳು** | | **3,45,83,546.74** |
| 20,92,137.00 | ಲಾಭಾಂಶ ಕೊಡಬೇಕಾಗಿರುವುದು | 27,67,035.00 | |
| 37,80,669.67 | ಕೊಡಬೇಕಾದ ಡಿಮ್ಯಾಂಡ್ ಡ್ರಾಫ್ಟ್ | 30,89,016.67 | |
| 85,70,276.74 | ಕೊಡಬೇಕಾದ ಪೇ ಆರ್ಡರ್‌ಗಳು | 96,64,560.07 | |
| 1,14.23.086.00 | ಅಮಾನತ್ ಖಾತೆ | 7,68,053.00 | |
| 7.45.953.00 | ಸಂಡ್ರಿ ಬಾಬ್ತುಗಳು | 1,37,11,382.00 | |
| 44,81,600.00 | ಲಾಕರ್ ಠೇವಣಿಗಳು | 45,83,500.00 | |
| 4,56,05,826.66 | **ಲಾಭ ಮತ್ತು ನಷ್ಟ ಖಾತೆ** | | **4,52,81,623.48** |
| | ಕಳೆದ ವರ್ಷದ ಲಾಭ | 4,56,05,826.66 | |
| | ವಿನಿಯೋಗಿಸಿದ್ದು | 4,56,05,826.66 | |
| | ಈ ಸಾಲಿನ ನಿವ್ವಳ ಲಾಭ (ಲಾಭ-ನಷ್ಟ ಖಾತೆಯಿಂದ) | 4,25,81,623.48 | |
| | **ನಾನ್ ಬ್ಯಾಂಕಿಂಗ್ ಅಸೆಟ್** | | **1,09,23,700.00** |
| 17,84,161.00 | **ಘಟನಾಪೇಕ್ಷ ಬಾಧ್ಯತೆಗಳು** | 18,02,661.00 | |
| | **ಬ್ಯಾಂಕ್ ಗ್ಯಾರಂಟಿಗಳನ್ನು ನೀಡಿರುವುದು** | | |
| 79,99,548.23 | ಆರ್.ಬಿ.ಐ.ನ ಡೆಫ್ ಖಾತೆಯಲ್ಲಿ ಕಾಂಟ್ರಾ | 95,39,448.29 | |
| **693,03,97,561.53** | **ಜುಮ್ಲಾ** | | **822,37,78,469.78** |

| 31.03.2019 ರಲ್ಲಿ ಇದ್ದಂತೆ ರೂ. ಪೈ. | ಸ್ವತ್ತು ಮತ್ತು ಆಸ್ತಿಗಳು | | 31.03.2020 ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 66,77,59,154.74 | **ನಗದು ಶಿಲ್ಕು** | | **36,71,01,788.75** |
| 6,32,21,523.00 | ಕೈಯಲ್ಲಿ ಶಿಲ್ಕು | 7,75,17,539.00 | |
| 6,18,07,631.74 | ರಿಸರ್ವ್ ಬ್ಯಾಂಕ್/ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ/ರಾಜ್ಯ ಮತ್ತು ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ | 6,95,84,249.75 | |
| 54,27,30,000.00 | ಖಾಯಂ ಠೇವಣಿಗಳಲ್ಲಿ | 22,00,00,000.00 | |
| 76,04,45,741.09 | **ಶಿಲ್ಕು ಇತರೆ ಬ್ಯಾಂಕ್ ಗಳಲ್ಲಿ** | | **170,55,70,529.40** |
| 25,40,95,741.09 | ಚಾಲ್ತಿ ಖಾತೆಗಳಲ್ಲಿ | 21,88,20,529.40 | |
| 50,63,50,000.00 | ಖಾಯಂ ಠೇವಣಿಗಳಲ್ಲಿ | 89,67,50,000.00 | |
| - | **ಮನಿ ಅಟ್ ಕಾಲ್ ಅಂಡ್ ಶಾರ್ಟ್ ನೋಟಿಸ್** | 59,00,00,000.00 | |
| 313,83,18,324.37 | **ಸಂಚಯಗಳು** | | **316,30,70,876.56** |
| 261,72,17,224.37 | ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ | 292,19,69,776.56 | |
| 261,72,17,224.37 | ಪುಸ್ತಕ ಮೌಲ್ಯ | 292,19,69,776.56 | |
| 261,41,30,000.00 | ಮುಖಬೆಲೆ | 291,52,60,000.00 | |
| 259,96,17,224.42 | ಮಾರುಕಟ್ಟೆ ಬೆಲೆ | 298,51,17,178.82 | |
| 52,10,00,000.00 | ಮತ್ತಿತರೆ ಭದ್ರತೆಗಳಲ್ಲಿ | 24,10.00.000.00 | |
| 1,01,100.00 | ಸಹಕಾರಿ ಸಂಘಗಳ ಷೇರುಗಳಲ್ಲಿ | 1,01,100.00 | |
| 211,17,00,246.66 | **ಸಾಲಗಳು** | | **268,87,60,455.89** |
| 111,29,11,889.37 | ಅಲ್ಪಾವಧಿ ಸಾಲಗಳು | 142,14,50,140.60 | |
| | ಕ್ಯಾಷ್ ಕ್ರೆಡಿಟ್ ಓವರ್ ಡ್ರಾಫ್ಟ್, ಬಿಲ್ಸ್ ಡಿಸ್ಕೌಂಟ್ಸ್ | | |
| 111,28,05,101.57 | ವಾಸ್ತವಿಕ ಭದ್ರತೆಗಳ ಮೇಲೆ | 142,13,43,352.80 | |
| 111,29,11,889.37 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 142,14,50,140.60 | |
| 6,25,16,448.80 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 6,83,53,430.80 | |
| | ವಸೂಲಾಗದ ಮತ್ತು ವಸೂಲಾತಿಗೆ | | |
| 45,155.80 | ಅನುಮಾನಾಸ್ಪದವೆಂದು ಪರಿಗಣಿಸಿದ್ದು | 45,155.80 | |
| 46,14,65,837.29 | **ಮಧ್ಯಮಾವಧಿ ಸಾಲಗಳು** | 51,76,41,073.29 | |
| 27,34,35,647.00 | ವಾಸ್ತವಿಕ ಭದ್ರತೆಗಳ ಮೇಲೆ | 35,42,44,948.00 | |
| 46,14,65,837.29 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 51,76,41,073.29 | |
| 3,40,43,200.05 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 3,83,37,703.46 | |
| | ವಸೂಲಾಗದ ಮತ್ತು ವಸೂಲಾತಿಗೆ | | |
| | ಅನುಮಾನಾಸ್ಪದವೆಂದು ಪರಿಗಣಿಸಿದ್ದು | | |
| 53,73,22,520.00 | **ದೀರ್ಘಾವಧಿ ಸಾಲಗಳು** | 74,96,69,242.00 | |
| 53,73,22.520.00 | ವಾಸ್ತವಿಕ ಭದ್ರತೆಗಳ ಮೇಲೆ | 74,96,69,242.00 | |
| 53,73,22,520.00 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 74,96,242.00 | |
| 5,24,91,270.00 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 6,49,04,568.00 | |
| | ವಸೂಲಾಗದ ಮತ್ತು ವಸೂಲಾತಿಗೆ | | |
| | ಅನುಮಾನಾಸ್ಪದವೆಂದು ಪರಿಗಣಿಸಿದ್ದು | | |
| | **ವಸೂಲಾಗತಕ್ಕ ಮತ್ತು ವಸೂಲಾತಿಗೆ ಕಳುಹಿಸಿರುವ ಬಿಲ್ಲುಗಳು (ಎದುರು ತೋರಿಸಿದಂತೆ)** | | **24,06,34,024.29** |
| 21,16,09,994.93 | **ಬರಬೇಕಾಗಿರುವ ಬಡ್ಡಿ** | | |
| 3,79,45,510.82 | 1. ಸಂಚಯಗಳ ಮೇಲೆ | 4,35,06,608.99 | |
| 17,36,64,484.11 | 2. ಕಟ್ ಬಾಕಿ ಸಾಲಗಳ ಮೇಲಿನ ಬಡ್ಡಿ (ಎದುರು ತೋರಿಸಿದಂತೆ) | 19,71,27,415.30 | |
| 51,67,844.77 | **ಪೀಠೋಪಕರಣಗಳು** | | **47,45,200.32** |
| 1,48,55,708.87 | **ಸ್ಥಿರ ಆಸ್ತಿಗಳು** | | **1,41,12,924.47** |
| 2,05,40,546.10 | **ಇತರೆ ಆಸ್ತಿಗಳು** | | **2,40,16,315.10** |
| 8,35,914.00 | 1. ಗಣಕ ಯಂತ್ರಗಳು | 9,94,296.00 | |
| 6,83,085.10 | 2. ಮುಂಗಡಗಳು | 5,32,194.10 | |
| 1,53,000.00 | 3. ಹಬ್ಬದ ಮುಂಗಡಗಳು | 3,36,000.00 | |
| 2,48,765.00 | 4. ವಾಹನ | 14,28,543.00 | |
| 1,55,19,146.00 | 5. ಆದಾಯ ತೆರಿಗೆ ಮುಂಗಡ | 1,84,09,213.00 | |
| 23,49,844.00 | 6. ಕಂಪ್ಯೂಟರ್ ಸಾಫ್ಟ್‌ವೇರ್ | 13,95,116.00 | |
| 20,485.00 | 7. ಇ-ಸ್ಟಾಂಪಿಂಗ್ | 1,90,646.00 | |
| 7,30,307.00 | 8. ಎ.ಟಿ.ಎಂ. ಕಾರ್ಡ್ ಅಕೌಂಟ್ | 7,30,307.00 | |
| | ನಾನ್ ಬ್ಯಾಂಕಿಂಗ್ ಅಸೆಟ್ | | **1,57,66,355.00** |
| **693,03,97,561.53** | **ಜುಮ್ಲಾ** | | **822,37,78,469.78** |

**ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆಯಂತೆ ಮೇಲ್ಕಂಡ ಆಸ್ತಿ-ಜವಾಬ್ದಾರಿ ತಃಖ್ತೆಗಳಿಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣೆಗಳು :**

i & ii) ದಿನಾಂಕ 31.03.2020ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇಕಡಾ 27.9ರಷ್ಟು ಇರುವುದು. ಈ ಪ್ರಮಾಣವು ಕಳೆದ ಸಾಲಿನ ವರ್ಷಾಂತ್ಯಕ್ಕೆ ಶೇಕಡಾ 31.0ರಷ್ಟು ಇದ್ದು ಈ ಸಾಲಿನಲ್ಲಿ ಶೇಕಡಾ 3.1ರಷ್ಟು ಕಡಿಮೆಯಾಗಿರುತ್ತದೆ.

iii) ಹೂಡಿಕೆಗಳು : ಅ) ಪುಸ್ತಕ ಬೆಲೆ ಮತ್ತು ಮುಖ ಬೆಲೆಗಳನ್ನು ಆ) ಮಾರುಕಟ್ಟೆಯ ಬೆಲೆಗಳನ್ನು (ಅಢಾವೆ ಪತ್ರಿಕೆಯಲ್ಲಿ ನಮೂದಿಸಿದೆ).

ಇ) Details of Issuer composition of Non-SLR investments and non performing Non-SLR Investments.

| No. | Issuer | Amount | Extent of Below Investment Grade Securities | Extent of Un Rated Securities | Extent of Un Listed Securities |
|---|---|---|---|---|---|
| (1) | (2) | (3) | (4) | (5) | (6) |
| 1 | PSUs | | | | |
| 2 | FIS | | | | |
| 3 | Public Sector Banks | | | | |
| 4 | Mutual Funds | 2410.00 | | 2410.00 | |
| 5 | Others | 1.01 | | 1.01 | |
| 6 | Provision Held towards Depreciation | 351.05 | | | |

iv) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್, ಹೌಸಿಂಗ್ ಸಾಲ ರೂ. 4,838.59 ಲಕ್ಷ ಇರುತ್ತದೆ.

v) ಷೇರು, ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.

vi) (ಅ) ಈ ಸಾಲಿನಲ್ಲಿ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಭದ್ರತಾ ಆಧಾರಗಳ ಮೇಲೆ ದಿನಾಂಕ 31.3.2020ಕ್ಕೆ ಯಾವ ಸಾಲವೂ ಇರುವುದಿಲ್ಲ.

(ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ಯಾವುದೇ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.

vii) 2019-20ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಸರಾಸರಿ ಬಡ್ಡಿಯ ವೆಚ್ಚವು (Cost of Deposit) ಶೇಕಡಾ 6.45 ರಷ್ಟು ಇದೆ.

viii & ix) ಬ್ಯಾಂಕಿನ ಪ್ರಸಕ್ತಸಾಲಿನ ಅನುತ್ಪಾದಕ ಆಸ್ತಿಗಳು ಹಿಂದಿನ ಸಾಲಿನ ಅನುತ್ಪಾದಕ ಆಸ್ತಿಗಳೊಂದಿಗೆ ತುಲನೆ ಮಾಡಿದ ವಿವರಗಳು ಕೆಳಕಂಡಂತೆ ಇರುತ್ತವೆ.

ರೂ. ಲಕ್ಷಗಳಲ್ಲಿ

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಒಟ್ಟು ಸಾಲಗಳಿಗೆ ಶೇಕಡವಾರು | ಮೊಬಲಗು | ಶೇಕಡವಾರು |
| 31.03.2019 | 1650.39 | 7.82 | 0.00 | 0.00. |
| 31.03.2020 | 2639.05 | 9.82 | 0.00 | 0.00 |
| ವ್ಯತ್ಯಾಸ | 988.66 | 2.00 | - | - |

x) 2019-2020ನೇ ಸಾಲಿನಲ್ಲಿ ಬ್ಯಾಂಕಿನ ಲಾಭಗಳಿಕೆ ಈ ಕೆಳಕಂಡಂತಿದೆ.

* ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 7.10 ಇರುತ್ತದೆ.
* ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 0.20 ಇರುತ್ತದೆ. * ಬ್ಯಾಂಕಿನ ಲಾಭವು ದುಡಿಯುವ ಬಂಡವಾಳದ ಮೇಲೆ ಶೇಕಡಾ 1.11ಇರುತ್ತದೆ.
* ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ 0.56 ಇರುತ್ತದೆ.
* ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ. 879.24 ಲಕ್ಷ ಇರುತ್ತದೆ. * ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. 4.19 ಲಕ್ಷ ಇದೆ.

xi & xii) ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗುಗಳನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈಕೆಳಕಂಡಂತಿರುತ್ತದೆ. (ರೂ. ಲಕ್ಷಗಳಲ್ಲಿ)

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಗುಂತಾಯಗಳ ಸವಕಳಿ ನಿಧಿ | ಪ್ರಮಾಣಿಕ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ |
|---|---|---|---|
| 31.03.2019 | 2973.16 | 346.05 | 87.43 |
| 31.03.2020 | 3031.43 | 351.05 | 87.43 |
| **ವ್ಯತ್ಯಾಸ** | 58.27 | 5.00 | 0.00 |

xiii) ವಿದೇಶಿ ವಿನಿಮಯದ ಆಸ್ತಿ ಮತ್ತು ಜವಾಬ್ದಾರಿಗಳು : ಅನ್ವಯಿಸುವುದಿಲ್ಲ.

xiv) ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಂನ್ನು ದಿನಾಂಕ 28.05.2019 ಮತ್ತು 27.11.2019 ರಂದು ಒಟ್ಟು ರೂ. 69,70,527.27 ಪೈಸೆ ಡಿಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.

xv) ರಿಸರ್ವ್ ಬ್ಯಾಂಕಿನ ಯಾವುದೇ ದಂಡನಾರ್ಹನೆಗೆ ಗುರಿಯಾಗಿರುವುದಿಲ್ಲ

xvi) ಪುನರ್ರಚಿಸಲಾದ ಸಾಲದ ಖಾತೆಗಳು ಇರುವುದಿಲ್ಲ.

xvii) ಸ್ಥಿರಾಸ್ಥಿಗಳ ಮೌಲ್ಯಾಂಕನ/ಪುನರ್ ಮೌಲ್ಯಾಂಕನ : ಇರುವುದಿಲ್ಲ.

xviii)

| ಡೆಫ್ ಖಾತೆ :- | ಹಿಂದಿನ ವರ್ಷ | ಪ್ರಸಕ್ತ ವರ್ಷ |
|---|---|---|
| ವರ್ಗಾವಣೆ ಮಾಡಿದ ಪ್ರಾರಂಭಿಕ ಮೊತ್ತ | 70,90,923.55 | 79,99,,548.23 |
| +ಪ್ರಸಕ್ತ ವರ್ಷದಲ್ಲಿ ವರ್ಗಾವಣೆ ಮಾಡಿದ ಮೊತ್ತ | 9,08,624.68 | 15,39,900.06 |
| ಕೋರಿಕೆ ಮೇರೆಗೆ ವಾಪಾಸ್ಸು ಜಮಾ ಮಾಡಿದ ಮೊತ್ತ | - | - |
| ವರ್ಗಾಯಿಸಿದ ಅಂತಿಮ ಮೊತ್ತ | **79,99,548.23** | **95,39,448.29** |

**ಜಿ.ವಿ. ಶಿವಶಂಕರ್**
ಪ್ರಧಾನ ವ್ಯವಸ್ಥಾಪಕರು

**ಡಾ. ಎಂ.ಜಿ. ಈಶ್ವರಪ್ಪ**
ನಿರ್ದೇಶಕರು

**ಎ.ಎಸ್. ವೀರಣ್ಣ**
ನಿರ್ದೇಶಕರು

**ಎಸ್.ಎಸ್. ಮಲ್ಲಿಕಾರ್ಜುನ್**
ಉಪಾಧ್ಯಕ್ಷರು,
ಮಾಜಿ ಸಚಿವರು

**ಡಾ|| ಶಾಮನೂರು ಶಿವಶಂಕರಪ್ಪ**
ಅಧ್ಯಕ್ಷರು
ಶಾಸಕರು, ದಾವಣಗೆರೆ ದಕ್ಷಿಣ
ಹಾಗೂ ಮಾಜಿ ಸಚಿವರು

**ಸ್ಥಳ : ದಾವಣಗೆರೆ.**
**ದಿನಾಂಕ : 21.08.2020**

### "ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ"

**ನಾವು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು ಎಂಟು ಶಾಖೆಗಳ (ಕ್ರೋಢೀಕೃತ) 2019-2020ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ಇದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರದ ಪುಸ್ತಕಗಳು ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನಮ್ಮ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆ ಲಗತ್ತಿಸಿರುವ ಆಸ್ತಿ ಮ್ತತು ಜವಾಬ್ದಾರಿ ತಃಖ್ತೆ ಮತ್ತು ಲಾಭ ನಷ್ಟ ತಃಖ್ತೆಯು ದಿನಾಂಕ : 31.03.2020ಕ್ಕೆ ಇದ್ದಂತೆ ನಮ್ಮ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.**

**ಹುರಕಡ್ಲಿ ಅಂಡ್ ಕೋ ಪರವಾಗಿ ಚಾರ್ಟರ್ಡ್ ಅಕೌಂಟೆಂಟ್ C-05/03/2013-13:13:13:13FRN No.130775**
**(ಶ್ರೀ ಎಸ್.ಎಸ್. ಹುರಕಡ್ಲಿ) ಪ್ರೊಪ್ರೈಟರ್. ಮೆಂಬರ್‌ಶಿಪ್ ನಂ. 032400**

# ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ.,

ಆಡಳಿತ ಕಛೇರಿ, ನಂ. 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ-2.


ಶ್ರೀ ಎನ್.ಎಂ.ಜೆ.ಬಿ. ಆರಾಧ್ಯ
ಸಂಸ್ಥಾಪಕರು

## ಬ್ಯಾಂಕಿನ ಪ್ರಸ್ತುತ ಕಾರ್ಯಕಾರಿ ಮಂಡಳಿ ಸದಸ್ಯರುಗಳು


ಶ್ರೀ ಎನ್.ಎ. ಮುರುಗೇಶ್
ಅಧ್ಯಕ್ಷರು


ಶ್ರೀ ರಮಣ್ ಲಾಲ್ ಪಿ. ಸಂಘವಿ,
ನಿರ್ದೇಶಕರು


ಶ್ರೀ ಎಸ್.ಕೆ. ವೀರಣ್ಣ
ಸಂಸ್ಥಾಪಕ ನಿರ್ದೇಶಕರು


ಶ್ರೀ ಎ.ಹೆಚ್. ಕುಬೇರಪ್ಪ,
ನಿರ್ದೇಶಕರು


ಶ್ರೀಮತಿ ಜಯಮ್ಮ
ಪರಶುರಾಮಪ್ಪ, ನಿರ್ದೇಶಕರು


ಶ್ರೀ ಕೃಷ್ಣ ಸಾ ಭೂತೆ
ನಿರ್ದೇಶಕರು



ಶ್ರೀ ಶಂಕರ್ ಖಟಾವ್‌ಕರ್
ನಿರ್ದೇಶಕರು


ಶ್ರೀಮತಿ ಶಶಿಕಲಾ ರುದ್ರಯ್ಯ
ನಿರ್ದೇಶಕರು


ಶ್ರೀ ಎಸ್.ಕೆ. ಪ್ರಭು ಪ್ರಸಾದ್
ನಿರ್ದೇಶಕರು


ಶ್ರೀ ಕೆ.ಎಂ. ಜ್ಯೋತಿ ಪ್ರಕಾಶ್
ನಿರ್ದೇಶಕರು


ಶ್ರೀ ವೆಂಕಪ್ಪ ಪಿ.ಹೆಚ್.
ನಿರ್ದೇಶಕರು


ಶ್ರೀ ಕಿರುವಾಡಿ ವಿ. ಸೋಮಶೇಖರ್
ಉಪಾಧ್ಯಕ್ಷರು


ಶ್ರೀ ನಾಗೇಂದ್ರಚಾರಿ ಬಿ.
ನಿರ್ದೇಶಕರು


ಶ್ರೀ ಕೆ.ಹೆಚ್. ಶಿವಯೋಗಪ್ಪ
ನಿರ್ದೇಶಕರು



ಶ್ರೀಮತಿ ಅನಿಲಾ ಇಂದೂದರ್
ನಿಶಾನಿಮಠ್, ನಿರ್ದೇಶಕರು


ಶ್ರೀ ತಿಪ್ಪೇಸ್ವಾಮಿ ಹೆಚ್.ಬಿ.
ವೃತ್ತಿಪರ ನಿರ್ದೇಶಕರು


ಶ್ರೀ ಎಸ್.ಎಸ್. ಸಾಲಿಮಠ್
ವೃತ್ತಿಪರ ನಿರ್ದೇಶಕರು


ಶ್ರೀ ಎಂ.ಎಸ್. ರಾಮಚಂದ್ರ
ವಿಶೇಷ ಆಹ್ವಾನಿತರು


ಶ್ರೀ ಎ.ಎಸ್. ಸಿದ್ರಾಮಣ್ಣ
ವಿಶೇಷ ಆಹ್ವಾನಿತರು


ಶ್ರೀ ಎಂ. ಶಿವಲಿಂಗಸ್ವಾಮಿ
ಪ್ರಧಾನ ವ್ಯವಸ್ಥಾಪಕರು

## ದಿನಾಂಕ : 31.03.2020ಕ್ಕೆ ಇದ್ದಂತೆ ಲಾಭ- ನಷ್ಟದ ಪತ್ರಿಕೆ

| 31.03.2019 ರೂ. ಪೈ | ಖರ್ಚು | 31.03.2020 ರೂ. ಪೈ |
|---|---|---|
| 13,85,41,747-00 | ಠೇವಣಿಗಳ ಮತ್ತು ತಂದ ಸಾಲಗಳ ಮೇಲೆ ಕೊಟ್ಟ ಬಡ್ಡಿ | 14,31,78,923-00 |
| 4,70,87,341-00 | ನೌಕರರಿಗೆ ಪಾವತಿ ಮಾಡಿದ್ದು ಮತ್ತು ಅವಕಾಶ ಕಲ್ಪಿಸಿದ್ದು | 5,12,19,450-00 |
| 4,35,000-00 | ಆಡಳಿತ ಮಂಡಳಿಯ ಸದಸ್ಯರುಗಳ ಭತ್ಯೆ | 7,85,750-00 |
| 48,89,070-54 | ಬಾಡಿಗೆ,ತೆರಿಗೆಗಳು ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | 54,62,116-72 |
| 2,10,000-00 | ಕಾನೂನು ಖರ್ಚುಗಳು | 40,000-00 |
| 3,99,236-64 | ಅಂಚೆ, ತಂತಿ ಮತ್ತು ದೂರವಾಣಿ ಖರ್ಚು | 3,25,191-47 |
| 7,03,500-00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ಸಂಭಾವನೆ | 6,72,974-00 |
| 31,47,306-00 | ಆಸ್ತಿಗಳ ಮೇಲೆ ಸವಕಳಿ ಮತ್ತು ದುರಸ್ತಿ ಖರ್ಚು | 43,07,576-06 |
| 4,90,175-44 | ಮುದ್ರಣ ಮತ್ತು ಲೇಖನ ಸಾಮಗ್ರಿಗಳು | 5,38,437-38 |
| 2,11,59.550-05 | ಇತರೆ ಖರ್ಚುಗಳು | 1,94,96,937-43 |
| 2,05,59,867-00 | ಆದಾಯ ತೆರಿಗೆ ಪಾವತಿಸಿದ್ದು : | 2,41,43,962-00 |
| | ಹಿಂದಿನ ವರ್ಷಗಳ ಬಾಕಿ ಆದಾಯ ತೆರಿಗೆ ನೀಡಿದ್ದು | 23,72,757-00 |
| 8,00,000-00 | ಪ್ರಮಾಣಿತ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ | 0-00 |
| 14,84,991-00 | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆ. 36(1)(7ಎ) | 30,64,657-00 |
| 35,39,625-00 | ದೀರ್ಘಾವಧಿ ಸಾಲಗಳ ಆದಾಯದ ಮೇಲಿನ ಅವಕಾಶ (ಸೆ.36)(1)(8) | 67,03,198-00 |
| 11,68,076-00 | ಡೆಫರ್ಡ್ ಟ್ಯಾಕ್ಸ್ ಅವಕಾಶ ಕಲ್ಪಿಸಿದ್ದು | 0-00 |
| 3,55,23,789-95 | ನಿವ್ವಳ ಲಾಭ | 4,25,76,579-94 |
| **28,01,39,275-62** | ಒಟ್ಟು ರೂ. | **30,48,88,510-00** |

| 31.03.2019 ರೂ. ಪೈ | ಆದಾಯ | 31.03.2020 ರೂ. ಪೈ |
|---|---|---|
| 22,06,72,015-45 | ಬಡ್ಡಿ ಮತ್ತು ಸೋಡಿ | 23,80,91,646-45 |
| 48,03,279-88 | ದಲ್ಲಾಳಿ, ವಿನಿಮಯ ಮತ್ತು ರುಸುಂ | 54,94,195-67 |
| 5,41,65,458-96 | ಹೂಡಿಕೆ ಮೇಲೆ ಬಂದ ಬಡ್ಡಿ | 5,44,91,954-68 |
| 4,98,521-33 | ಇತರೆ ಆದಾಯ | 68,10,713-20 |
| **28,01,39,275-62** | ಒಟ್ಟು ರೂ. | **30,48,88,510-00** |

## ಅಢಾವೆ ಪತ್ರಿಕೆ ದಿನಾಂಕ : 31.03.2020ಕ್ಕೆ ಇದ್ದಂತೆ (2019-2020ನೇ ಸಾಲಿಗೆ)

| 31.03.2019 ರೂ. ಪೈ | ಬಂಡವಾಳ ಮತ್ತು ಜವಾಬ್ದಾರಿಗಳು | | 31.03.2020 ರೂ. ಪೈ |
|---|---|---|---|
| **5,56,07,225-00** | **ಷೇರು ಬಂಡವಾಳ** | | **5,59,21,300-00** |
| 5,55,64,825-00 | ವಿಲೇವಾರಿ ಆದ ಷೇರುಗಳು (ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ) | 5,58,74,600-00 | |
| 42,400-00 | ಸಹ ಸದಸ್ಯತ್ವ ವಿಲೇವಾರಿಯಾಗಿದ್ದು | 46,700-00 | |
| **37,53,77,453-54** | **ಕಾಯ್ದಿಟ್ಟ ಮತ್ತು ಇತರೆ ನಿಧಿಗಳು** | | **41,05,55,915-49** |
| 15,02,06,650-74 | ಕಾಯ್ದೆ ಬದ್ಧ ನಿಧಿ | 16,27,68,279-69 | |
| 4,55,71,179-65 | ಸಂಶಯಾಸ್ಪದ ಸಾಲಗಳ ನಿಧಿ | 4,74,75,207-65 | |
| 1,12,44,995-80 | ಸಾಮೂಹಿಕ ಕಲ್ಯಾಣ ನಿಧಿ | 1,31,49,023-80 | |
| 35,31,991-45 | ಸಿಬ್ಬಂದಿಯವರ ಗ್ರಾಚ್ಯುಟಿ ನಿಧಿ | 22,31,991-45 | |
| 1,84,32,782-20 | ಸಿಬ್ಬಂದಿಯವರ ಕ್ಷೇಮ ನಿಧಿ | 2,02,27,858-20 | |
| 77,53,469-70 | ಲಾಭಾಂಶ ಸಮೀಕರಿಸುವ ನಿಧಿ | 87,05,483-70 | |
| 4,37,94,396-00 | ಕಟ್ಟಡ ನಿಧಿ | 4,66,50,439-00 | |
| 8,640-00 | ಧರ್ಮಾರ್ಥ ನಿಧಿ | 1,442-00 | |
| 53,07,140-00 | ಜ್ಯುಬಿಲಿ ಫಂಡ್ | 62,59,154-00 | |
| 4,72,679-00 | ಸದಸ್ಯರ ಮರಣೋತ್ತರ ನಿಧಿ | 4,84,693-00 | |
| 12,159-00 | ಪ್ರಚಾರ ನಿಧಿ | 0-00 | |
| 3,41,51,877-00 | ಸಂಚಯದ ಮೇಲಿನ ಸವಕಳಿ ನಿಧಿ | 3,41,51,877-00 | |
| 1,55,00,000-00 | ಸಂಚಯ ಏರಿಳಿತ ನಿಧಿ | 1,80,00,000-00 | |
| 85,53,000-00 | ಪ್ರಮಾಣಿತ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ | 85,53,000-00 | |
| 52,84,865-00 | ನಿರ್ದೇಶಕರು/ಸಿಬ್ಬಂದಿ ವರ್ಗದವರ ಶೈಕ್ಷಣಿಕ ಅಧ್ಯಯನ ವಿದೇಶ ಪ್ರವಾಸ ನಿಧಿ | 62,36,879-00 | |
| 1,54,86,253-00 | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆ.36(1)(7ಎ) | 2,21,89,451-00 | |
| 92,36,762-00 | ಆದಾಯ ತೆರಿಗೆ (ಸೆ.36(1)(8)ರಂತೆ ಕರಡು ಸಾಲದ ನಿಧಿಗೆ ವಿಶೇಷವಾಗಿ ಕಾಯ್ದಿರಿಸಿದ್ದು. | 1,23,01,419-00 | |
| 8,28,613-00 | ಆರಾಧ್ಯ ಆಯುಷ್ಮಾನ್ ನಿಧಿ | 11,69,717-00 | |
| **2,29,30,35,618-63** | **ಠೇವಣಿಗಳು ಮತ್ತು ಇತರೆ ನಿಧಿಗಳು** | | **2,42,93,73,868-93** |
| **167,45,75,262-80** | **ಗಡುವು ಠೇವಣಿ** | 1,80,90,85,672-80 | |
| 142,93,18,080-80 | ವ್ಯಕ್ತಿಗಳಿಂದ | 1,59,18,49,080-80 | |
| 24,52,57,182-00 | ಸಂಘಗಳಿಂದ | 21,72,36,592-00 | |
| **51,74,26,257-92** | **ಉಳಿತಾಯ ಖಾತೆ ಠೇವಣಿ** | 51,95,39,943-05 | |
| 51,63,83,713-82 | ವ್ಯಕ್ತಿಗಳಿಂದ | 51,88,06,897-65 | |
| 10,42,544-10 | ಸಂಘಗಳಿಂದ | 7,33,045-40 | |
| **10,10,34,097-91** | **ಚಾಲ್ತಿ ಠೇವಣಿ** | 10,07,48,253-08 | |
| 7,76,46,086-76 | ವ್ಯಕ್ತಿಗಳಿಂದ | 8,28,07,397-23 | |
| 2,33,88,011-16 | ಸಂಘಗಳಿಂದ | 1,79,40,855-85 | |
| 0-00 | **ಸಾಲಗಳು :** | | 0-00 |
| 0-00 | ಆರ್.ಬಿ.ಐ. ಕೇಂದ್ರ /ರಾಜ್ಯ ಸರ್ಕಾರಗಳಿಂದ ತಂದ ಸಾಲಗಳು | 0-00 | |
| 48,590-00 | ವಸೂಲಾಗತಕ್ಕ ಮತ್ತು ವಸೂಲಿಗೆ ಬಂದಿರುವ ಬಿಲ್ಲುಗಳು | 0-00 | 0-00 |
| 1,56,60,912-00 | ಕೊಡಬೇಕಾದ ಬಡ್ಡಿ (Int. Payable) | | 1,20,50,138-00 |
| 75,58,299-39 | ಬರಬೇಕಾದ ಬಡ್ಡಿ (Overdue Int. Reserve) as per Contra | | 1,56,79,578-84 |
| **2,42,185-45** | **ಶಾಖೆಗಳ ಲೆಕ್ಕ ಹೊಂದಾಣಿಕೆ (Branch Liabilities)** | | **4,14,303-60** |
| **2,65,66,742-51** | **ಇತರೆ ಜವಾಬ್ದಾರಿಗಳು (Other Liabilities)** | | **2,60,26,688-93** |
| 43,32,548-00 | ಡೆಫರ್ಡ್ ತೆರಿಗೆ ಕೊಡಬೇಕಾದದ್ದು (Defferd Tax Liability) | 43,32,548-00 | |
| 12,73,996-00 | ಟಿ.ಡಿ.ಎಸ್. ಕೊಡಬೇಕಾದ್ದು | 5,40,446-00 | |
| 64,800-00 | ಕೊಡಬೇಕಾದ ಆಂತರಿಕ ಲೆಕ್ಕ ಪರಿಶೋಧನಾ ಶುಲ್ಕ | 45,900-00 | |
| 3,34,000-00 | ಕೊಡಬೇಕಾದ ಲೆಕ್ಕಪರಿಶೋಧನಾ ಶುಲ್ಕ | 6,68,000-00 | |
| 32,77,641-00 | ಕೊಡಬೇಕಾದ ಲಾಭಾಂಶ | 40,84,049-00 | |
| 11,74,912-31 | ಇತರೆ ಅಮಾನತ್ತು | 27,38,346-95 | |
| 71,50,000-00 | ಸಿಬ್ಬಂದಿಗೆ ಕೊಡಬೇಕಾದ ಎಕ್ಸ್‌ಗ್ರೇಷಿಯಾ | 77,00,000-00 | |
| 12,51,604-98 | ಕೊಡಬೇಕಾದ ಪೇ ಆರ್ಡರ್‌ಗಳು | 16,26,007-98 | |
| 92,054-00 | ಕೊಡಬೇಕಾದ ಡಿ.ಡಿ.ಗಳು | 92,054-00 | |
| 53,093-11 | ಎಸ್.ಜಿ.ಎಸ್.ಟಿ. ತೆರಿಗೆ ಕೊಡಬೇಕಾದದ್ದು | 0-00 | |
| 15,000-00 | ಚುನಾವಣೆ ಠೇವಣಿ | 0-00 | |
| 74,88,000-00 | ಕೊಡಬೇಕಾದ ಆದಾಯ ತೆರಿಗೆ | 41,37,929-00 | |
| 53,093-11 | ಸಿ.ಜಿ.ಎಸ್.ಟಿ. ತೆರಿಗೆ ಕೊಡಬೇಕಾದದ್ದು | 0-00 | |
| 6,000-00 | ನಗದು ಹೆಚ್ಚುವರಿ ಬಂದದ್ದು | 60,270-00 | |
| 0-00 | ಸ್ಟ್ಯಾಂಪ್ ತೆರಿಗೆ ಕೊಡಬೇಕಾದದ್ದು | 1,138-00 | |
| 1,000-00 | ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ | | 1,000-00 |
| | ಷೇರು ಹಣ ಕಾಯ್ದಿರಿಸಿದ್ದು | 1,000-00 | |
| 16,35,051-32 | **ದುರುಪಯೋಗದ ಹಣ ವಸೂಲಾತಿಗಾಗಿ ಕಾಯ್ದಿರಿಸಿದ್ದು** | | 16,35,051-32 |
| 2,50,204-00 | **ಮಾಜಿ ಕಾರ್ಯದರ್ಶಿ ಬಿ. ವೇಮಾರೆಡ್ಡಿ ಅವರಿಂದ 1995-96ನೇ ಸಾಲಿನ ಹಣ ಕಾಯ್ದಿರಿಸಿದ್ದು** | | 2,50,204-00 |
| **3,55,23,789-95** | **ಲಾಭ-ನಷ್ಟದ ಖಾತೆಯಿಂದ** | | **4,25,76,579-94** |
| 3,24,38,024-04 | ಹಿಂದಿನ ವರ್ಷದ ಲಾಭ | 3,55,23,789-95 | |
| 3,24,38,024-04 | ವಿನಿಯೋಗಿಸಿದ್ದು | 3,55,23,789-95 | |
| 3,55,23,789-95 | ಈ ಸಾಲಿನ ನಿವ್ವಳ ಲಾಭ (ಲಾಭ-ನಷ್ಟ ಖಾತೆಯಿಂದ) | 4,25,76,579-94 | |
| **281,15,07,071-79** | ಒಟ್ಟು ರೂ. | | **299,44,84,629-05** |
| **2,62,000-00** | **ವಹಿಸಿಕೊಂಡ ನಿರ್ದಿಷ್ಟ ಜವಾಬ್ದಾರಿಗಳು** (Contingent Liabilities) | 3,07,000-00 | |
| **31,00,471-97** | **ಡಿಪಾಸಿಟ್ ಎಜುಕೇಷನ್ ಅವೇರ್‌ನೆಸ್ ಫಂಡ್** (DEAF A/C) | 31,15,302-92 | |
| **33,62,471-97** | ಒಟ್ಟು ರೂ. | **34,22,302-92** | |

| 31.03.2019 ರೂ. ಪೈ | ಆಸ್ತಿ ಮತ್ತು ಸ್ಥಿರ ಸ್ವತ್ತುಗಳು | | 31.03.2020 ರೂ. ಪೈ |
|---|---|---|---|
| **5,99,59,266-92** | ನಗದು ಹಣ & ಆರ್.ಬಿ.ಐ. ಮತ್ತು ಎಸ್.ಬಿ.ಐ. ಬ್ಯಾಂಕುಗಳಲ್ಲಿರುವ ಶಿಲ್ಕು | | **4,92,72,223-92** |
| 4,54,09,108-00 | ನಗದು | 3,49,04,331-00 | |
| 24,91,894-17 | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 23,52,264-17 | |
| 1,20,58,264-75 | ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಮತ್ತು ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ | 1,19,94,028-75 | |
| | ಎ.ಟಿ.ಎಂ. ನಲ್ಲಿರುವ ನಗದು ಹಣ | 21,600-00 | |
| **48,20,17,592-12** | **ಇತರೆ ಬ್ಯಾಂಕುಗಳ ಶಿಲ್ಕು** | | **41,81,86,600-46** |
| 15,10,81,380-08 | ಚಾಲ್ತಿ ಠೇವಣಿ | 16,67,80,388-42 | |
| 30,59,36,212-04 | ಗಡುವು ಠೇವಣಿ | 21,64,06,212-04 | |
| 2,50,00,000-00 | ಫಿಕ್ಸ್ ಮೆಚ್ಯುರಿಟಿ ಪ್ಲಾನ್‌ನಲ್ಲಿ ತೊಡಗಿಸಿದ್ದು ಲಿಕ್ವಿಡ್ ಫಂಡ್‌ನಲ್ಲಿ ತೊಡಗಿಸಿದ್ದು | 3,50,00,000-00 | |
| **43,97,38,231-00** | **ಸಂಚಯಗಳು :** | | **50,96,97,921-00** |
| 43,97,38,231-00 | **ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ** | 50,96,97,921-00 | |
| 43,97,38,231-00 | ಪುಸ್ತಕದ ಬೆಲೆ | 50,96,97,921-00 | |
| 43,55,80,000-00 | ಮುಖಬೆಲೆ | 50,55,80,000-00 | |
| 42,96,54,000-00 | ಮಾರುಕಟ್ಟೆ ಬೆಲೆ | 51,75,99,630-00 | |
| 1,000-00 | **ಇತರೆ ಸಹಕಾರಿ ಸಂಘಗಳ ಷೇರುಗಳಲ್ಲಿ** | | **1,000-00** |
| 1,000-00 | ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ | 1,000-00 | |
| 1,77,50,16,648-48 | **ಸಾಲ ಮತ್ತು ಮುಂಗಡಗಳು** | | **1,94,98,39,352-74** |
| 77,18,68,770-78 | **ಅಲ್ಪಾವಧಿಯ ಸಾಲಗಳು:** | 74,11,87,810-74 | |
| 0-00 | ಬಿಲ್‌ಗಳ ಸೋಡಿ ಮಾಡಿದ್ದು | 0-00 | |
| 58,75,12,714-73 | ಕ್ಯಾಷ್ ಕ್ರೆಡಿಟ್, ಓವರ್ ಡ್ರಾಫ್ಟ್ & ಸಾಲಗಳು ಬೇಡಿಕೆಯ ಮೇಲೆ ಬರಬೇಕಾದ್ದು | 66,84,37,908-44 | |
| 18,40,98,152-00 | ಸಾಲಗಳು ಇತರೆ ಸುಸ್ಪಷ್ಟ ಆಧಾರದ ಮೇಲೆ | 7,03,50,992-00 | |
| 2,57,904-05 | ಆಧಾರ ರಹಿತ ಸಾಲಗಳು | 23,98,910-30 | |
| | (ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ರೂ. 2,33,96,022-00) | | |
| **63,18,49,326-70** | **ಮಧ್ಯಮಾವಧಿ ಸಾಲಗಳು:** | 90,62,80,421-00 | |
| 62,40,42,995-70 | ಇದರಲ್ಲಿ ಸುಸ್ಪಷ್ಟ ಆಧಾರಗಳ ಮೇಲೆ | 89,75,14,964-00 | |
| 78,06,331-00 | ಆಧಾರ ರಹಿತ ಸಾಲಗಳು | 87,65,457-00 | |
| | (ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ರೂ. 3,24,88,996-00) | | |
| **37,12,98,551-00** | **ದೀರ್ಘಾವಧಿ ಸಾಲಗಳು :** | 30,23,71,121-00 | |
| 37,12,98,551-00 | ಇದರಲ್ಲಿ ಸುಸ್ಪಷ್ಟ ಆಧಾರಗಳ ಮೇಲೆ | 30,23,71,121-00 | |
| | (ಮೇಲ್ಕಂಡ ಸಾಲಗಳ ಮೇಲೆ ಸುಸ್ತಿ ರೂ. 57,72,050-00) | | |
| 48,590-00 | **ವಸೂಲಾಗತಕ್ಕ ಮತ್ತು ವಸೂಲಿಗೆ ಬಂದ ಬಿಲ್ಲುಗಳು** | 0-00 | **0-00** |
| 0-00 | **ಶಾಖೆಗಳ ಲೆಕ್ಕ ಹೊಂದಾಣಿಕೆ :** | 0-00 | **0-00** |
| 1,59,15,511-48 | **ನಿಶ್ಚಿತ ಆಸ್ತಿಗಳು:** | 1,87,49,029-30 | **2,75,03,226-52** |
| 82,61,590-85 | ನಿವೇಶನ ಮತ್ತು ಕಟ್ಟಡಗಳು | 76,44,020-39 | |
| 39,01,882-54 | ಪೀಠೋಪಕರಣಗಳು | 60,39,107-78 | |
| 4,271-36 | ವಾಚನಾಲಯ & ಪುಸ್ತಕಗಳು | 4,370-36 | |
| 39,734-00 | ಜೆರಾಕ್ಸ್ ಯಂತ್ರ | 33,774-00 | |
| 11,98,987-00 | ವಾಹನದ ಖಾತೆ | 16,77,157-88 | |
| 19,91,027-23 | ಯಂತ್ರೋಪಕರಣ | 28,61,004-04 | |
| 5,18,018-50 | ಸಿ.ಸಿ. ಕ್ಯಾಮೆರಾ ಮತ್ತು ಬಯೋಮೆಟ್ರಿಕ್ | 4,89,594-85 | |
| 56,22,694-64 | **ಗಣಕಯಂತ್ರಗಳು ಮತ್ತು ಪರಿಕರಗಳು** | 87,54,197-22 | |
| 12,85,404-24 | ಕಂಪ್ಯೂಟರ್ ಹಾರ್ಡ್‌ವೇರ್ | 22,62,726-48 | |
| 9,64,415-40 | ಯು.ಪಿ.ಎಸ್. & ಬ್ಯಾಟರಿ | 8,19,753-74 | |
| 7,34,544-00 | ಸಿ.ಬಿ.ಎಸ್. ವೈರ್ ಲೆಸ್ ಕನೆಕ್ಟಿವಿಟಿ | 5,89,253-00 | |
| 20,94,831-00 | ಸಿಬಿಎಸ್ ಕಂಪ್ಯೂಟರ್ ಹಾರ್ಡ್‌ವೇರ್ | 16,42,477-00 | |
| 5,43,500-00 | ಕಂಪ್ಯೂಟರ್ ಸಾಫ್ಟ್‌ವೇರ್ | 34,39,987-00 | |
| 2,37,43,982-44 | **ಇತರೆ ಆಸ್ತಿಗಳು** | | **2,24,19,470-25** |
| 1,67,900-00 | ಇತರೆ ಖರ್ಚಿನ ಮುಂಗಡ | 1,10,000-00 | |
| 36,00,010-00 | 2007-08ರ ಆದಾಯ ತೆರಿಗೆ ಬರಬೇಕಾದದ್ದು | 9,82,628-00 | |
| 8,98,130-00 | 2008-09ರ ಆದಾಯತೆರಿಗೆ ಬರಬೇಕಾದದ್ದು | 8,98,130-00 | |
| 14,52,830-00 | 2010-11ರ ಆದಾಯ ತೆರಿಗೆ ಬರಬೇಕಾದದ್ದು | 14,52,830-00 | |
| 5,02,530-00 | 2011-12ರ ಆದಾಯ ತೆರಿಗೆ ಬರಬೇಕಾದದ್ದು | 5,02,530-00 | |
| 14,47,537-00 | 2012-13ರ ಆದಾಯ ತೆರಿಗೆ ಪಾವತಿಸಿದ್ದು | 14,47,537-00 | |
| 9,500-00 | ದೂರವಾಣಿ ಠೇವಣಿ ಮಾಡಿದ್ದು | 9,500-00 | |
| 1,18,26,626-33 | ಸಂಚಯದ ಮೇಲೆ ಬರತಕ್ಕ ಬಡ್ಡಿ | 1,20,96,404-44 | |
| 6,77,235-26 | ಪುಸ್ತಕ ಮತ್ತು ಫಾರಂ | 7,22,105-59 | |
| 59,580-00 | ಕೆ.ಇ.ಬಿ. ಡಿಪಾಸಿಟ್ | 75,680-00 | |
| 12,00,000-00 | ಎಂಸಿಸಿ 'ಎ'ಬ್ಲಾಕ್ ಶಾಖೆ ಲೀಸ್ ಮುಂಗಡ | 12,00,000-00 | |
| 12,920-88 | ಆರ್.ಬಿ.ಐ.ನಿಂದ ಡೆಫ್ ಹಣ ಬರಬೇಕಾಗಿದ್ದು | 14,409-88 | |
| 3,00,000-00 | ಕಟ್ಟಡದ ಮುಂಗಡ ಹಣ ಪಾವತಿಸಿದ್ದು | 9,00,000-00 | |
| 0-00 | ಐ.ಜಿ.ಎಸ್.ಟಿ.ತೆರಿಗೆ ಬರಬೇಕಾದದ್ದು | 2,156-00 | |
| 85,931-48 | ಎಸ್.ಜಿ.ಎಸ್.ಟಿ.ತೆರಿಗೆ ಬರಬೇಕಾದದ್ದು | 1,07,463-00 | |
| 85,931-49 | ಸಿ.ಜಿ.ಎಸ್.ಟಿ.ತೆರಿಗೆ ಬರಬೇಕಾದದ್ದು | 1,42,522-00 | |
| 0-00 | ಸೋಲಾರ್ ಪವರ್ ಪ್ಲಾಂಟ್ | 10,60,334-34 | |
| 10,21,320-00 | ಎ.ಟಿ.ಎಂ. ಯಂತ್ರ & ಕಾರ್ಡ್ಸ್ | 4,43,240-00 | |
| 3,96,000-00 | ಹಬ್ಬದ ಮುಂಗಡ ಬರಬೇಕಾದದ್ದು | 2,52,000-00 | |
| 75,58,299-39 | ಬರಬೇಕಾದ ಬಡ್ಡಿ (Interest Receivable) | | |
| 75,58,299-39 | ಸಾಲ ಮತ್ತು ಮುಂಗಡಗಳಿಂದ ಬರಬೇಕಾದ ಬಡ್ಡಿ | 1,56,79,578-84 | **1,56,79,578-84** |
| 16,35,051-32 | ದುರುಪಯೋಗದ ಹಣ ಬಿ. ಚಿನ್ನಮಸ್ತಾನ ರೆಡ್ಡಿಯಿಂದ ಬರಬೇಕಾದ ಬಾಬ್ತು | | **16,35,051-32** |
| 2,50,204-00 | ಮಾಜಿ ಕಾರ್ಯದರ್ಶಿ ಬಿ. ವೇಮಾರೆಡ್ಡಿ ಇವರಿಂದ ಬರಬೇಕಾದ ಬಾಬ್ತು | | **2,50,204-00** |
| **281,15,07,071-79** | ಒಟ್ಟು ರೂ. | | **299,44,84,629-05** |

## ಮರೆಯಾದ ಮಾಣಿಕ್ಯ



ಸಂಗೀತ ಲೋಕದ ಸ್ವರ ಮಾಂತ್ರಿಕ
ಕಾಣಲಿಲ್ಲ ಮತ್ತೊಂದು ಹಗಲು
ಸಿನಿರಂಗಕೆ ಬಡಿಯಿತು ಸಿಡಿಲು
ಅಭಿಮಾನಿ ಬಳಗದಲಿ ಹರಿದಿದೆ
ಕಣ್ಣೀರ ಕಡಲು

ಸಾವಿರಾರು ಗಾನಗಳ ಹಾಡಿದ
ಮಾಧುರ್ಯಝರಿ
ನಟರೆಲ್ಲರಿಗೂ ಹೊಂದುತಿದ್ದ ಕಂಠಸಿರಿ
ವಿಶಿಷ್ಟತೆ ಮೆರೆದ ನಟನೆಯ ಪರಿ
ಹಲವು ಭಾಷೆಯಲಿ ಹಾಡಿದ ಹೆಮ್ಮೆಯ ಗರಿ.

ನಡೆ ನುಡಿಯಲಿ ಸರಳತೆ ಮೆರೆದ ಗುಣವಂತ
ಕೇಳುಗರ ಹೃದಯವ ಸೆಳೆದ ಸಾಮಂತ
ಹಾಡುಗಾರಿಕೆಯಲಿ ಅವನೇ ಅಗ್ರಜ
ಗಾನಲೋಕ ಮರೆಯದ ದಿಗ್ಗಜ

ರಾಗ, ಭಾವ, ಭಕ್ತಿ ತುಂಬಿ ಹಾಡಿದ ಗಾನ ಗಾರುಡಿಗ
ವಿರಾಮ ಬಯಸಿತೇ ಕಂಠವೀಗ
ಆ ದೇವನಿಗೆ ಕೇಳಲಿಲ್ಲವೇ ಅಭಿಮಾನಿಗಳ ಮೊರೆ
ಅಕಾಲದಲಿ ಬಂದಿತೇ ಕಾಲನ ಕರೆ

ಸಂಗೀತ ಸಾಮ್ರಾಟನಿಗೆ ಸಲ್ಲಿಸುವೆವು ನುಡಿ ನಮನ
ಬಯಸುವೆವು ಮತ್ತೊಮ್ಮೆ ಧ್ರುವತಾರೆಯ ಆಗಮನ
ಇಂಪಾದ ಗಾನಗಳಲ್ಲಿದೆ ಅವರ ಅಸ್ಥಿತ್ವ
ಎಲ್ಲರ ಹೃದಯದಲ್ಲಡಗಿದೆ ಅವರ ಆತ್ಮ

**- ಎಂ.ಎಸ್.ಮಂಜುಳ ಮಂಜಪ್ಪ, ದಾವಣಗೆರೆ.**

## ಆಕ್ಸಿಜನ್ ಬೆಲೆ ನಿಯಂತ್ರಣ

**(1ನೇ ಪುಟದಿಂದ)** ದ ಶಿಫಾರಸ್ಸಿನ ಅನ್ವಯ ಕಾರ್ಖಾನೆಯಿಂದ ಹೊರ ತರುವ ವೈದ್ಯಕೀಯ ಆಕ್ಸಿಜನ್ ಮೇಲೆ ಬೆಲೆ ನಿರ್ಬಂಧ ಹೇರಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಆಕ್ಸಿಜನ್ ಸಿಲಿಂಡರ್‌ಗಳ ಬೆಲೆಯ ಮೇಲೂ ನಿರ್ಬಂಧ ಹೇರುವಂತೆ ಸಮಿತಿಯು ಎನ್‌ಪಿಪಿಎಗೆ ತಿಳಿಸಿತ್ತು ಎಂದು ರಾಸಾಯನಿಕ ಹಾಗೂ ರಸಗೊಬ್ಬರ ಸಚಿವಾಲಯ ಹೇಳಿದೆ.

ಆಕ್ಸಿಜನ್ ಸಿಲಿಂಡರ್ ಹಾಗೂ ದ್ರವ ವೈದ್ಯಕೀಯ ಆಕ್ಸಿಜನ್ ಮೇಲಿನ ಬೆಲೆ ನಿಯಂತ್ರಣದ ಅಧಿಕಾರವನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ವಿಕೋಪ ನಿರ್ವಹಣಾ ಕಾಯ್ದೆ, 2005ರ ಅನ್ವಯ ಎನ್‌ಪಿಪಿಎಗೆ ಬಿಟ್ಟು ಕೊಟ್ಟಿದೆ.

ಪ್ರಾಧಿಕಾರವು ಸೆಪ್ಟೆಂಬರ್ 25ರಂದು ಸಭೆ ನಡೆಸಿದ್ದು, ವಿಕೋಪ ನಿರ್ವಹಣಾ ಕಾಯ್ದೆಯಡಿ ನೀಡಲಾದ ವಿಶೇಷ ಅಧಿಕಾರ ಬಳಸಿಕೊಂಡು ಆಕ್ಸಿಜನ್ ಬೆಲೆ ಮೇಲೆ ನಿಯಂತ್ರಣ ಹೇರಿದೆ.

ಕೈಗಾರಿಕೆಗಳಿಂದ ನೀಡಲಾಗುವ ಆಕ್ಸಿಜನ್ ಬೆಲೆ ಕ್ಯುಬಿಕ್ ಮೀಟರ್‌ಗೆ ಜಿಎಸ್‌ಟಿ ರಹಿತವಾಗಿ 15.22 ರೂ. ಹಾಗೂ ಕಾರ್ಖಾನೆಯಿಂದ ಮಾರಲಾಗುವ ಆಕ್ಸಿಜನ್ ಸಿಲಿಂಡರ್ ಬೆಲೆ ಕ್ಯುಬಿಕ್ ಮೀಟರ್‌ಗೆ ಜಿಎಸ್‌ಟಿ ರಹಿತವಾಗಿ 25.71 ರೂ. ಆಗಿರಬೇಕು ಎಂದು ತಿಳಿಸಲಾಗಿದೆ.

ರಾಜ್ಯ ಸರ್ಕಾರಗಳು ಆಕ್ಸಿಜನ್ ಖರೀದಿಗಾಗಿ ಈಗಾಗಲೇ ಒಪ್ಪಂದ ಮಾಡಿಕೊಂಡಿದ್ದರೆ, ಗ್ರಾಹಕರ ಹಿತದೃಷ್ಟಿಯಿಂದ ಹಾಲಿ ಇರುವ ದರಗಳು ಮುಂದುವರೆಯಲಿವೆ ಎಂದು ತಿಳಿಸಲಾಗಿದೆ. ದೇಶೀಯ ಉತ್ಪಾದನೆ ಹಾಗೂ ಪೂರೈಕೆಗೆ ಈ ಬೆಲೆಗಳು ಅನ್ವಯವಾಗಲಿವೆ.

## ಕಾರ್ಯದರ್ಶಿಯಾಗಿ ಸಿ.ಟಿ. ರವಿ

**(1ನೇ ಪುಟದಿಂದ)** ಎರಡು ಹುದ್ದೆಗಳಲ್ಲಿ ಮುಂದುವರೆಯುವಂತೆ ಅವಕಾಶ ಮಾಡಿಕೊಡುತ್ತದೆಯೋ ಕಾದು ನೋಡಬೇಕು.

ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ 25+1 ಸ್ಥಾನಗಳನ್ನು ನೀಡಿ ಮತ್ತೆ ಪ್ರಧಾನಿ ನರೇಂದ್ರ ಮೋದಿಗೆ ಬೆಂಬಲ ಸೂಚಿಸಿತ್ತು.


ಕರ್ನಾಟಕದಲ್ಲಿ ಪಕ್ಷವನ್ನು ಬಲಗೊಳಿಸುವ ಮತ್ತು ಹಳೇ ಮೈಸೂರು ಭಾಗದಲ್ಲಿ ಹಿಡಿತ ಸಾಧಿಸುವ ಉದ್ದೇಶದಿಂದ ಒಕ್ಕಲಿಗ ಸಮುದಾಯಕ್ಕೆ ಸೇರಿದ ರವಿ ಅವರಿಗೆ ಈ ಮಹತ್ವದ ಹುದ್ದೆ ದೊರೆತಿದೆ ಎನ್ನಲಾಗಿದೆ.

## ಭೂ ಸುಧಾರಣಾ ವಿಧೇಯಕ ಅಂಗೀಕಾರ

**(1ನೇ ಪುಟದಿಂದ)** ಅನುಭವಿಸಿದ್ದೇನೆ. ಇನ್ನು ಸಾಮಾನ್ಯ ರೈತರ ಪಾಡೇನು? ಎಂದರು.

ಕಾಯ್ದೆಯ ನ್ಯೂನತೆ ಸರಿಪಡಿಸಿ ಸುಧಾರಣೆ ತರಬೇಕು. ಕೆಲವು ಬದಲಾವಣೆ ತರುವುದಾದರೆ ಸ್ವಾಗತಿಸುತ್ತೇನೆ ಎಂದರು. ಬಳಿಕ ಕೆಲವು ತಿದ್ದುಪಡಿಯೊಂದಿಗೆ ಕಾಂಗ್ರೆಸ್ ಸಭಾತ್ಯಾಗದ ನಡುವೆ ವಿಧಾನಸಭೆಯಲ್ಲಿ ಅಂಗೀಕಾರವಾಯಿತು.

# ನಾಳೆ ಹೊನ್ನಾಳಿ ಬಂದ್‌ಗೆ ರೈತರ ಕರೆ



ಹೊನ್ನಾಳಿ, ಸೆ.26 - ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕು ಬಂದ್‌ಗೆ ರೈತ ಸಂಘಗಳು ನಾಡಿದ್ದು ದಿನಾಂಕ 28 ರ ಸೋಮವಾರ ಬೆಳಗ್ಗೆ 6 ರಿಂದ ಸಂಜೆ 6 ಗಂಟೆ ವರೆಗೆ ತಾಲ್ಲೂಕು ಬಂದ್ ಗೆ ಕರೆ ನೀಡಿದ್ದು, ಈ ಕರೆಗೆ ಸಹಕರಿಸುವಂತೆ ತಹಶೀಲ್ದಾರ್ ತನುಜಾ ಟಿ. ಸವದತ್ತಿ ಅವರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಕೆ.ಸಿ. ಬಸಪ್ಪ ಮಾತನಾಡಿ, ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಸುಗ್ರೀವಾಜ್ಞೆ ಆದೇಶದ ವಿರುದ್ಧ ಹಾಗೂ ಎಪಿಎಂಸಿ ಕಾಯ್ದೆ ತಿದ್ದುಪಡಿ ಸುಗ್ರೀವಾಜ್ಞೆ, ಕೈಗಾರಿಕೆ, ವಾಣಿಜ್ಯಗಳು ಮತ್ತಿತರೆ ಕಾಯ್ದೆಗಳ ತಿದ್ದುಪಡಿಗಳೊಂದಿಗೆ ರೈತರ ಹಕ್ಕುಗಳಿಗೆ ಚ್ಯುತಿ ತರುತ್ತಿರುವ ಕ್ರಮವನ್ನು ಖಂಡಿಸಿ ಈ ಪ್ರತಿಭಟನೆ ನಡೆಸಲಿದ್ದು ರೈತ ವರ್ಗ ಹಾಗೂ ಸಾರ್ವಜನಿಕರು ಬಂದ್‌ಗೆ ಸಹಕರಿಸುವಂತೆ ಮನವಿ ಮಾಡಿರುವರು.

ಈ ಸಂದರ್ಭದಲ್ಲಿ ರೈತ ಸಂಘದ ಗೌ.ಅ ಹಿರೇಮಠ ಬಸಣ್ಣ, ಉಪಾಧ್ಯಕ್ಷ ಹೊಳೆಹರಳಹಳ್ಳಿ ಬಸವರಾಜಪ್ಪ ಕಾರ್ಯದರ್ಶಿ ಕರಿಬಸಪ್ಪ, ದಿಡಗೂರು ರಾಜಪ್ಪ, ಹಳ್ಳೂರು ರೇಣುಕಪ್ಪ ಇದ್ದರು.

# ಆಸ್ಪತ್ರೆಗಳಿಗೆ ಡಿಸಿ ದಿಢೀರ್ ಭೇಟಿ-ಪರಿಶೀಲನೆ

**(1ನೇ ಪುಟದಿಂದ)** ಸೆಂಟ್ರಲ್ ಆಸ್ಪತ್ರೆ ಮುಂತಾದ ಖಾಸಗಿ ಆಸ್ಪತ್ರೆಗಳಲ್ಲಿನ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿದರು.

ಆಸ್ಪತ್ರೆಗಳಲ್ಲಿ ದೊರೆಯುತ್ತಿರುವ ವಿವಿಧ ಚಿಕಿತ್ಸಾ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು. ಎಲ್ಲರನ್ನು ಪ್ರತ್ಯೇಕವಾಗಿ ಮಾತನಾಡಿಸಿದ ಡಿಸಿ ಬೀಳಗಿ, ಆರೋಗ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಆದ್ಯತೆ ನೀಡಬೇಕು ಎಂದು ಕಿವಿ ಮಾತು ಹೇಳಿದರು.

ಜಿಲ್ಲಾ ಪ್ರಭಾರ ಆರೋಗ್ಯಾಧಿಕಾರಿ ಡಾ. ಮೀನಾಕ್ಷಿ, ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರಾದ ಶಿರಸ್ತೇದಾರ್ ಬಿ.ಡಿ. ಮರುಳಸಿದ್ದಪ್ಪ ಮತ್ತಿತರರು ಜಿಲ್ಲಾಧಿಕಾರಿಗಳೊಂದಿಗಿದ್ದರು.

## 'ಸಪ್ತಕಗಳ ಸ್ವರಮಾಂತ್ರಿಕ'ನಿಗೆ ನುಡಿ ಸುಮಗಳ ನಮನ

ಹಾಡು ಹಾಡಿತು ಹಕ್ಕಿ, ಗೂಡು ಸೇರುವ ತನಕ
ಗೂಡು ಸೇರಿತು... ಶಬ್ಧವಡಗಿತು... ಗಾಢ ನಿದ್ರೆಗೆ ಜಾರಿತು

ಪಾರಮಾರ್ಥದ ಸವಿಯ, ಜೇನಿನಮೃತ ಸುಧೆಯ
ಭಕ್ತಿರಸ ಶಿವಸ್ತುತಿಯ, ಯಡೆಯೂರ ಸ್ತುತಿ ಸುಧೆಯ
ಗಡಿನಾಡ ಸಂಸ್ಕೃತಿಯ, ನುಡಿ ಕನ್ನಡದ ಚೆಲುವ
ಹಾಡಿ ಹೊಗಳಿದ ನಿಮ್ಮ ಹೇಗೆ ಮರೆಯಲು ಸಾಧ್ಯ...?

ಹುಟ್ಟಿ ಬನ್ನಿರಿ ಮತ್ತೆ, ಈ ನೆಲದ ಹೊನ್ನಾಗಿ
ಭಾರತದ ಮಾಮರದ ಚೆಲ್ವ ಕೋಗಿಲೆಯಾಗಿ
ಸ್ವರವಾಗಿ... ತರಿವಾಗಿ... ಝುರಿಯಾಗಿ...
ಸಾಗರದ ಅಲೆಯಾಗಿ... ಹುಟ್ಟಿ ಬನ್ನಿರಿ ಮತ್ತೆ ಈ ತಾಯಮಡಿಲಲ್ಲಿ

ಸ್ವರಮಾಂತ್ರಿಕನೆ ನಿಮಗೆ ಕರಮುಗಿವೆ ಶಿರಬಾಗಿ, ಸ್ವರಗೈವೆ ಶರಣಾಗಿ
ಸಪ್ತಕಗಳ ಸ್ವರಮಾಲೆಯ ಅರ್ಪಿಸುವೆವು ಗುರುವೆ.

**- ಸಂಗಪ್ಪ ತೋಟದ್, ದಾವಣಗೆರೆ. ಮೊ : 97382 55075**

## ಮಂಜುನಾಥ್ ಅವರಿಗೆ ಪಿ.ಹೆಚ್.ಡಿ



ದಾವಣಗೆರೆ, ಸೆ.26- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಜೆ.ಎಂ.ಮಂಜುನಾಥ್ ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯವು ಪಿ.ಹೆಚ್.ಡಿ. ಪದವಿ ನೀಡಿದೆ.

'ಕರ್ನಾಟಕದಲ್ಲಿ ಮಂಡಕ್ಕಿ ಉದ್ಯಮಗಳ ಕಾರ್ಯಕ್ಷಮತೆ : ಒಂದು ಅಧ್ಯಯನ' ವಿಷಯ ಕುರಿತು ದಾವಣಗೆರೆ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ|| ಜಿ.ಟಿ.ಗೋವಿಂದಪ್ಪ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಮಂಜುನಾಥ್ ಅವರಿಗೆ ಈ ಪದವಿ ಲಭಿಸಿದೆ .

ಮಂಜುನಾಥ್ ಅವರು ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಜಕ್ಕವ್ವರ ಮಲ್ಲಪ್ಪ ಮತ್ತು ನೀಲಮ್ಮ ದಂಪತಿ ಪುತ್ರ.


**ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್**

ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಮೊ. 99168 73399, 93432 77422, 99161 73399



**ದಸರಾ ಹಬ್ಬದ ಪ್ರಯುಕ್ತ ಮೆಕ್ಯಾನಿಕ್‌ಗಳಿಗೆ ಸುವರ್ಣಾವಕಾಶ**

ಹೆಚ್.ಪಿ. ಬ್ರಾಂಡೆಡ್ ಕಂಪನಿಯ ಎಲ್ಲಾ ತರಹದ ಆಯಿಲ್ ಮತ್ತು ಗ್ರೀಸ್ ಡೀಲರ್ ಕಮೀಷನ್ ಹೊರತುಪಡಿಸಿ ಕಡಿಮೆ ದರದಲ್ಲಿ ಸಿಗುತ್ತದೆ. ತಕ್ಷಣ ಸಂಪರ್ಕಿಸಿ :

**ಶಂಕರ ಲೀಲಾ ಪೆಟ್ರೋಲ್ ಬಂಕ್**

ಆವರಗೆರೆ – ದಾವಣಗೆರೆ.

ಮೊ. 90190-94446

* Conditions appply


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 26.09.2020ರಂದು ನಿಧನರಾದ ನಮ್ಮ ಬ್ಯಾಂಕಿನ ಆಡಳಿತ ಮಂಡಳಿಯ ಮಾಜಿ ನಿರ್ದೇಶಕರಾದ

**ಶ್ರೀ ಬಾಳೆಹೊಲದ ಬಸವರಾಜ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ

**ಶಿವ ಸಹಕಾರಿ ಬ್ಯಾಂಕ್ ನಿ.,**
ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ.

**ಭಾವಪೂರ್ಣ ಶ್ರದ್ಧಾಂಜಲಿ**



ನಮ್ಮೆಲ್ಲರ ಆತ್ಮೀಯ ಗೆಳೆಯನಾದ ಆಗ್ರೋ ಇನ್ಪುಟ್ಸ್ ಡೀಲರ್ಸ್ ಅಸೋಷಿಯನ್ ಕಾರ್ಯದರ್ಶಿ, ಬಾಳೆ ಹೊಲದ ಆಗ್ರೋ ಪಾಲುದಾರರು ಹಾಗೂ ಶಿವ ಸಹಕಾರಿ ಬ್ಯಾಂಕಿನ ಮಾಜಿ ನಿರ್ದೇಶಕರಾದ

**ಬಾಳೆಹೊಲದ ಬಸವರಾಜ್‌ರವರು**

ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

- ಬಿಎಸ್. ಪ್ರಕಾಶ್ ಶಿವ ಬ್ಯಾಂಕ್ ನಿರ್ದೇಶಕರು.
- ದ್ಯಾಮಲಾಂಬ ಟ್ರೇಡರ್ಸ್ ರಘು, ಬೆಳ್ಳೂಡಿ ಉಮೇಶ್,
- ಶಕ್ತಿ ಟ್ರೇಡಿಂಗ್ ಕಂಪನಿ. ಮಲ್ಲಿಕಾರ್ಜುನ, ಬೆಳವನೂರು
- ಕುಮಾರ್, ಪ್ರಮೋದ್ ಟ್ರೇಡರ್ಸ್ ಪ್ರಮೋದ್,
- ಮಹಾಲಿಂಗೇಶ್ವರ ಟ್ರೇಡರ್ಸ್, ರೇಣುಕಾಂಬ ಟ್ರೇಡರ್ಸ್,
- ಎನ್ ಟಿ. ಗುರುಪಾದ ಅಂಡ್ ಸನ್ಸ್
- ಬೇತೂರು ಮರಡಿ ಟ್ರೇಡರ್ಸ್, ಮಧು

ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ.**

ಯುಬಿಡಿಟಿ ಇಂಜಿನಿಯರಿಂಗ್ ವಿದ್ಯಾರ್ಥಿ ನಿಲಯದ ಎದುರು, ದಾವಣಗೆರೆ-4
ಫೋನ್/ಫ್ಯಾಕ್ಸ್: 08192-220075 E-Mail: principal.ucfa@gmail.com

**ಬಿ.ವಿ.ಎ ಪದವಿಯ ಫೌಂಡೇಶನ್ ಕೋರ್ಸಿಗೆ ಪ್ರವೇಶ ಪ್ರಕಟಣೆ 2020-21**

ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜಾದ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆಇಲ್ಲಿ 2020-21ನೇ ಶೈಕ್ಷಣಿಕ ಸಾಲಿಗೆ ನಾಲ್ಕು ವರ್ಷ (**1 ವರ್ಷ ಫೌಂಡೇಶನ್ & 3 ವರ್ಷ ಸ್ನಾತಕ ಪದವಿ**) ಗಳ ಅವಧಿಯ ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ (ಬಿವಿಎ) ಪದವಿ ಕೋರ್ಸಿನ 1. **ಬಿವಿಎ ಚಿತ್ರಕಲೆ (BVA Painting)**, 2. **ಬಿವಿಎ ಅನ್ವಯಿಕ ಕಲೆ (BVA Applied Art)**, 3. **ಬಿವಿಎ ಶಿಲ್ಪಕಲೆ (BVA Sculpture)** 4. **ಬಿವಿಎ ಅನಿಮೇಷನ್ ಅಂಡ್ ಮಲ್ಟಿಮೀಡಿಯಾ (BVA Animation & Multimedia)** ವಿಭಾಗಗಳಲ್ಲಿನ ಫೌಂಡೇಶನ್ ಕೋರ್ಸಿಗೆ ಪ್ರವೇಶಕ್ಕಾಗಿ **ಪಿಯುಸಿ** ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ನಿಗದಿತ ಪ್ರವೇಶ ಅರ್ಜಿ ನಮೂನೆಗಳನ್ನು (ಸಾಮಾನ್ಯ ಅಭ್ಯರ್ಥಿಗಳು ರೂ.100/- ಹಾಗೂ ಪ.ಜಾ/ಪ.ಪ/ಪ್ರವರ್ಗ-1 ರ ಅಭ್ಯರ್ಥಿಗಳು ರೂ.75/-ಗಳನ್ನು) ಕಾಲೇಜಿನಲ್ಲಿ ನಗದಾಗಿ ಅಥವಾ ಅಂಚೆ ಮೂಲಕ ಪಡೆಯ ಬಯಸುವ ಅಭ್ಯರ್ಥಿಗಳು 23X10 ಸೆಂ.ಮೀ ಅಳತೆಯ ಸ್ವವಿಳಾಸದ ಲಕೋಟೆಗೆ ರೂ.25/- ಅಂಚೆ ಚೀಟಿಗಳನ್ನು ಅಂಟಿಸಿ ಕ್ರಾಸ್ ಮಾಡಿದ ಡಿ.ಡಿಯನ್ನು ಪ್ರಾಚಾರ್ಯರು, ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ಇವರ ಪದನಾಮದಲ್ಲಿ ಪಡೆದು ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ ಪ್ರವೇಶ ಅರ್ಜಿಯನ್ನು ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 15-10-2020ರ** ವರೆಗೆ ನಿಗದಿಪಡಿಸಲಾಗಿದೆ. ಆಯ್ಕೆಯಾದ ಅರ್ಹ ಅಭ್ಯರ್ಥಿಗಳು ಪ್ರವೇಶಕ್ಕಾಗಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಉತ್ತೀರ್ಣರಾದ ಬಗ್ಗೆ ಮೂಲ ಅಂಕಪಟ್ಟಿ ಹಾಗೂ ಇತರೆ ಅವಶ್ಯಕ ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾನಿಲಯ ನಿಗದಿಪಡಿಸಿದ ವಾರ್ಷಿಕ ಪ್ರವೇಶ ಶುಲ್ಕ ಪಾವತಿಸಿ, ಪ್ರವೇಶ ಪಡೆಯಬಹುದಾಗಿದೆ.

ಹೆಚ್ಚಿನ ಶೈಕ್ಷಣಿಕ ವಿವರಗಳಿಗಾಗಿ ಈ ಕಛೇರಿಯದೂರವಾಣಿ ಸಂಖ್ಯೆ ಮತ್ತು ಮಹಾವಿದ್ಯಾಲಯದ ಪ್ರಾಚಾರ್ಯರನ್ನು ಈ ಕೆಳಗೆ ಕಾಣಿಸಿದ ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ.

**ಕಛೇರಿ ದೂರವಾಣಿ: 08192-220075**
**ಪ್ರಾಚಾರ್ಯರ ಮೊಬೈಲ್ ನಂ : 9964065643**

**ಸಹಿ/- ಕುಲಸಚಿವರು**
ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.

# ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.

**ಆಡಳಿತ ಕಛೇರಿ, ನಂ. 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ-2**

**ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆಯಂತೆ ಮೇಲ್ಕಂಡ ಆಸ್ತಿ-ಜವಾಬ್ದಾರಿ ತಃಖ್ತೆಗಳಿಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿಗಳು**

**(4ನೇ ಪುಟದಿಂದ)**

1. ದಿನಾಂಕ : 31.3.2020ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital To Risk Asset Ratio) ಪ್ರಮಾಣವು ಶೇಕಡಾ 16.28 ರಷ್ಟು ಇರುತ್ತದೆ. ಈ ಪ್ರಮಾಣವು ಕಳೆದ ಸಾಲಿನ ವರ್ಷಾಂತ್ಯಕ್ಕೆ ಶೇ. 16.54 ರಷ್ಟು ಇದ್ದು, ಈ ಸಾಲಿನಲ್ಲಿ ಶೇ. 0.26ರಷ್ಟು ಹೆಚ್ಚಿಗೆಯಾಗಿರುತ್ತದೆ.
2. ತೊಡಗಣೆಗಳ ಮುಖ ಬೆಲೆ ರೂ. 50.56, ಪುಸ್ತಕದ ಬೆಲೆ ರೂ. 50.97 ಮತ್ತು ಮಾರುಕಟ್ಟೆ ಬೆಲೆ ರೂ. 51.76 ಕೋಟಿ ಇದ್ದು ಅಥಾವೆ ಪತ್ರಿಕೆಯಲ್ಲಿ ನಮೂದಿಸಿದೆ.
3. ಅ) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್ಸ್‌ರವರಿಗೆ ಈ ಸಾಲಿನಲ್ಲಿ ರೂ. 1726.98 ಲಕ್ಷಗಳಷ್ಟು ಸಾಲಗಳನ್ನು ನೀಡಲಾಗಿದೆ.
   ಆ) ಗೃಹ ನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಹೌಸಿಂಗ್ ಸಾಲವು ರೂ. 1095.52 ಲಕ್ಷ ಇರುತ್ತದೆ.
4. ಷೇರು, ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.
8. 2019-20ನೇ ಸಾಲಿನಲ್ಲಿ ಬ್ಯಾಂಕಿನ ಲಾಭಗಳಿಕೆ ಈ ಕೆಳಕಂಡಂತಿದೆ.
   * ಬ್ಯಾಂಕಿನ ಬಡ್ಡಿ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 9.83 ಇರುತ್ತದೆ.
   * ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 0.41 ಇರುತ್ತದೆ.
   * ಬ್ಯಾಂಕಿನ ಲಾಭವು ದುಡಿಯುವ ಬಂಡವಾಳದ ಮೇಲೆ ಶೇಕಡಾ 1.35 ಇರುತ್ತದೆ.
   * ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ 10.24ಇರುತ್ತದೆ.
   * ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ. 706.32 ಲಕ್ಷಗಳು ಇರುತ್ತದೆ.
   * ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. 6.87 ಲಕ್ಷಗಳು ಇರುತ್ತದೆ.
9. ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಂನ್ನು ದಿ. : 13.05.2019 ಮತ್ತು 29.11.2019ರಂದು ಒಟ್ಟು ರೂ.25.27.773-00 ಡಿಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.
10. ಬ್ಯಾಂಕು ಸಾಲಾಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ ರೂ. 3.07 ಲಕ್ಷಗಳಿಗೆ ಬ್ಯಾಂಕ್ ಖಾತರಿ (Bank Guarantee)ಯನ್ನು ಕೊಟ್ಟಿರುತ್ತದೆ.
11. ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗುಗಳನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಸಂಚಯಗಳ ಸವಕಳಿ ನಿಧಿ | ಸಂಚಯಗಳ ಏರಿಳಿತ ನಿಧಿ |
|---|---|---|---|---|
| 31.03.2019 | 610.57 | 85.53 | 341.52 | 155.00 |
| 31.03.2020 | 696.65 | 85.53 | 341.52 | 180.00 |
| **ವ್ಯತ್ಯಾಸ** | **86.08** | **0.00** | **0.00** | **25.00** |

5. ಅ) ವರದಿ ಸಾಲಿನಲ್ಲಿ ಬ್ಯಾಂಕು ನಿರ್ದೇಶಕ ಮಂಡಳಿಯ ಯಾವುದೇ ಸದಸ್ಯರಿಗೆ ಹೊಸ ಸಾಲಗಳನ್ನು ನೀಡಿರುವುದಿಲ್ಲ.
   ವರದಿ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ಯಾವುದೇ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿದ್ದು ಇರುವುದಿಲ್ಲ.
   ಆ) 2019-20ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಸರಾಸರಿ ಬಡ್ಡಿಯ ವೆಚ್ಚವು (Cost of Deposit) ಶೇಕಡಾ 6.59ರಷ್ಟು ಇದೆ.
6. ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಹಿಂದಿನ ಸಾಲಿನ ಅನುತ್ಪಾದಕ ಆಸ್ತಿಗಳೊಂದಿಗೆ ತುಲನೆ ಮಾಡಿದ ವಿವರಗಳು ಕೆಳಕಂಡಂತೆ ಇರುತ್ತವೆ.

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಒಟ್ಟು ಸಾಲಗಳಿಗೆ ಶೇಕಡಾವಾರು | ಮೊಬಲಗು | ಶೇಕಡಾವಾರು |
| 31.03.2019 | 488.10 | 2.75 | -122.47 | -0.71 |
| 31.03.2020 | 1611.47 | 8.26 | 914.82 | 4.87 |
| **ವ್ಯತ್ಯಾಸ** | **1123.37** | **5.51** | --- | --- |

12. Non-SLR **ಹೂಡಿಕೆಗಳ ಬಗ್ಗೆ ವಿವರಗಳು (ರೂ. ಲಕ್ಷಗಳಲ್ಲಿ)**

| 1 | Issuer | Amt | Extent of below investment Grade Securities | Extent of Un Rated Securities | Extent of Un listed securities |
|---|---|---|---|---|---|
| 2 | Public Sector Undetaking | --- | --- | --- | --- |
| | Financial Institutions | --- | --- | --- | --- |
| 3 | Public Sector Banks | --- | --- | --- | --- |
| 4 | Mutual Funds | 350.00 | --- | --- | --- |
| 5. | Others | 0.0 | --- | --- | --- |
| 6. | Provision held to Depreciation | 341.52 | --- | --- | --- |

ಡೆಫ್ ಖಾತೆ :- ಆರಂಭಿಕ ಮೊತ್ತ ರೂ. 31.00.471.97 ಪ್ರಸಕ್ತ ವರ್ಷ ವರ್ಗಾವಣೆ ಮಾಡಿದ ಮೊತ್ತ ರೂ. 14,830-95 ಕೋರಿಕೆ ಮೇರೆಗೆ ವಾಪಾಸ್ ಮಾಡಿದ ಮೊತ್ತ ಇಲ್ಲ. ವರ್ಗಾಯಿಸಿದ ಅಂತಿಮ ಮೊತ್ತ ರೂ. 31,15,302-92

| ಸಹಿ/- | ಸಹಿ/- | ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|---|---|
| **ಎಂ. ಶಿವಲಿಂಗಸ್ವಾಮಿ** | **ಎ.ಹೆಚ್. ಕುಬೇರಪ್ಪ** | **ಎಸ್.ಕೆ. ವೀರಣ್ಣ** | **ರಮಣ್ ಲಾಲ್ ಪಿ. ಸಂಘವಿ** | **ಶ್ರೀ ಕಿರುವಾಡಿ ವಿ. ಸೋಮಶೇಖರ್** | **ಎನ್.ಎ. ಮುರುಗೇಶ್** |
| ಪ್ರಧಾನ ವ್ಯವಸ್ಥಾಪಕರು | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ಉಪಾಧ್ಯಕ್ಷರು | ಅಧ್ಯಕ್ಷರು |

**ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ**

ನಾವು ದಿ ದಾವಣಗೆರೆ -ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು 7 ಶಾಖೆಗಳ (ಕ್ರೋಢೀಕೃತ) 2019-20ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ಇದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರದ ಪುಸ್ತಕಗಳು ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನಮ್ಮ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆ ಲಗತ್ತಿಸಿರುವ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಯನ್ನು ಮತ್ತು ಲಾಭ-ನಷ್ಟ ತಃಖ್ತೆಯು ದಿನಾಂಕ : 31.03.2020ಕ್ಕೆ ಇದ್ದಂತೆ ನಮ್ಮ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತವೆ ಎಂದು ದೃಢೀಕರಿಸುತ್ತೇವೆ.

ದಾವಣಗೆರೆ. ದಿನಾಂಕ : 26.06.2020

ಸಹಿ/- ಚಂದ್ರಮೋಹನ್ ಕೆ.ವೈ.
ಸನ್ನದು ಲೆಕ್ಕಪರಿಶೋಧಕರು,
**(ಚಂದ್ರಮೋಹನ್ ಕೆ.ವೈ. & ಕೊ.) ಮಾಲೀಕರು : ಸದಸ್ಯತ್ವ ಸಂಖ್ಯೆ : 203282**

## ಎಲೆಬೇತೂರು-ದಾವಣಗೆರೆ ಮಧ್ಯೆ ಸಿಮೆಂಟ್ ರಸ್ತೆ ಪಕ್ಕ ಭೂ ಕುಸಿತ



ದಾವಣಗೆರೆ, ಸೆ.26- ದಾವಣಗೆರೆ-ಜಗಳೂರು ರಸ್ತೆ ಮಧ್ಯೆ ಎಲೆಬೇತೂರು ಹತ್ತಿರ ಮಳೆ ಹೆಚ್ಚಾಗಿ ನೀರು ಅಲ್ಲೇ ಹರಿದು, ಸಿಮೆಂಟ್ ರಸ್ತೆ ಪಕ್ಕ ಭೂ ಕುಸಿತಗೊಂಡಿದೆ. ವಾಹನ ಸಂಚಾರ ದಟ್ಟಣೆ ಹೆಚ್ಚಿರುವುದರಿಂದ ಸಿಮೆಂಟ್ ರಸ್ತೆ ಹಾಳಾಗುವುದನ್ನು ತಡೆಗಟ್ಟಲು ಹಾಗೂ ಪ್ರಯಾಣಿಕರಿಗೆ ಅಪಾಯ ಇರುವುದರಿಂದ ಇದಕ್ಕೆ ಸಂಬಂಧಪಟ್ಟ ಪಿಡಬ್ಲ್ಯೂಡಿ ಅಧಿಕಾರಿಗಳು ತಕ್ಷಣ ಸರಿಪಡಿಸಿ, ಮುಂದೆ ಆಗುವ ಅನಾಹುತವನ್ನು ತಪ್ಪಿಸಬೇಕೆಂದು ಗ್ರಾಮಸ್ಥರು ಕೋರಿದ್ದಾರೆ.

# ಸಂಘಟನೆಯಲ್ಲಿ ಮೂಲ ಸಿದ್ಧಾಂತಕ್ಕೆ ಹತ್ತಿರ ಇರುವವರಿಗೆ ಆದ್ಯತೆ

**ಬಿಜೆಪಿ : ಹೊಸಬರಿಗೆ ಅವಕಾಶ, ದೇಶವ್ಯಾಪಿ ವಿಸ್ತರಣೆಗೆ ಒತ್ತು**

ನವದೆಹಲಿ, ಸೆ. 26 – ರಾಷ್ಟ್ರೀಯ ಪದಾಧಿಕಾರಿಗಳಲ್ಲಿ ಪ್ರಮುಖ ಬದಲಾವಣೆ ಮಾಡಿರುವ ಬಿಜೆಪಿ, ಪಕ್ಷಕ್ಕೆ ದೇಶವ್ಯಾಪಿ ಸ್ವರೂಪ ನೀಡಿದೆ. ಹೊಸ ಮುಖಗಳಿಗೆ ಅವಕಾಶ ನೀಡಿದ್ದು, ಪಕ್ಷದ ಮೂಲ ಸಿದ್ಧಾಂತಕ್ಕೆ ಹತ್ತಿರ ಇರುವವರಿಗೆ ಮಣೆ ಹಾಕಿದೆ.

ರಾಮ್ ಮಾಧವ್, ಪಿ. ಮುರಳೀಧರ ರಾವ್ ಹಾಗೂ ಅನಿಲ್ ಜೈನ್ ಸೇರಿದಂತೆ ಹಲವು ಪ್ರಮುಖ ಪ್ರಧಾನ ಕಾರ್ಯದರ್ಶಿಗಳನ್ನು ಬದಲಿಸಲಾಗಿದೆ. ಹಿಂದುತ್ವದ ಪ್ರಬಲ ಪ್ರತಿಪಾದಕರಾಗಿರುವ ತೇಜಸ್ವಿ ಸೂರ್ಯ ಅವರನ್ನು ಪಕ್ಷದ ಯುವ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇದುವರೆಗಿದ್ದ ಪೂನಮ್ ಮಹಾಜನ್ ಅವರ ಜಾಗಕ್ಕೆ ಸೂರ್ಯ ಬಂದಿದ್ದಾರೆ.

ಪಶ್ಚಿಮ ಬಂಗಾಳದ ಮುಕುಲ್ ರಾಯ್, ಮಹಾರಾಷ್ಟ್ರದ ವಿನೋದ್ ತಾವಡೆ ಮತ್ತು ಮಹಾರಾಷ್ಟ್ರದ ಪಂಕಜ ಮುಂಡೆ ಅವರಿಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ.

ರಾಯ್ ಅವರನ್ನು ಉಪಾಧ್ಯಕ್ಷರನ್ನಾಗಿ ಮತ್ತು ತಾವಡೆ ಹಾಗೂ ಪಂಕಜ ಅವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ. ಈ ಮೂವರು ತಮ್ಮ ತಮ್ಮ ರಾಜ್ಯಗಳ ನಾಯಕತ್ವದ ಬಗ್ಗೆ ಮುನಿಸಿಕೊಂಡಿದ್ದಾರೆ ಎಂದು ಹೇಳಲಾಗಿತ್ತು.

ಉಮಾ ಭಾರತಿ ಅವರನ್ನು ಉಪಾಧ್ಯಕ್ಷ ಸ್ಥಾನದಿಂದ ಕೈ ಬಿಡಲಾಗಿದೆ. ಸಂಸದ ವಿನಯ್ ಸಹಸ್ರಬುದ್ಧೆ, ಪ್ರಭಾತ್ ಝಾ, ಓಂ ಪ್ರಕಾಶ್ ಮಾಥುರ್ ಹಾಗೂ ಶ್ಯಾಮ್ ಜಾಜು ಅವರನ್ನು ಕೈ ಬಿಡಲಾಗಿದೆ.

ನೂತನ ತಂಡದ ಪದಾಧಿಕಾರಿಗಳಿಗೆ ಅಭಿನಂದಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಜನರಿಗೆ ನಿಸ್ವಾರ್ಥಿಗಳಾಗಿ ಸೇವೆ ಸಲ್ಲಿಸುವ ಪಕ್ಷದ ಸಂಪ್ರದಾಯವನ್ನು ಎತ್ತಿ ಹಿಡಿಯುವುದಾಗಿ ಆಶಿಸಿದ್ದಾರೆ.

ನೂತನ ಐವರು ಪ್ರಧಾನ ಕಾರ್ಯದರ್ಶಿಗಳ ಪೈಕಿ ದುಶ್ಯಂತ್ ಕುಮಾರ್ ಗೌತಮ್ ಹಾಗೂ ಡಿ. ಪುರಂದರೇಶ್ವರಿ ಆಂಧ್ರ ಪ್ರದೇಶದವರು. ಸಿ.ಟಿ. ರವಿ ಕರ್ನಾಟಕ, ತರುಣ್ ಛುಗ್ ಪಂಜಾಬ್ ಮತ್ತು ದಿಲೀಪ್ ಸೈಕಿಯಾ ಅವರು ಅಸ್ಸಾಂನವರು.

ಬುಪೇಂದರ್ ಯಾದವ್, ಕೈಲಾಶ್ ವಿಜಯವರ್ಗೀಯ ಹಾಗೂ ಅರುಣ್ ಸಿಂಗ್ ಅವರು ಪ್ರಧಾನ ಕಾರ್ಯದರ್ಶಿಗಳಾಗಿ ಮುಂದುವರೆದಿದ್ದಾರೆ. ಸ್ಥಾನಗಳಿಗೆ ಸೂಕ್ತವಾಗಿ ಹೊಂದಿಕೊಳ್ಳಬಲ್ಲವರು ಹಾಗೂ ಪಕ್ಷದ ಸಿದ್ಧಾಂತವನ್ನು ಪ್ರತಿಬಿಂಬಿಸುವವರನ್ನು ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪದಾಧಿಕಾರಿಗಳ ಸ್ಥಾನದಿಂದ ಕೈ ಬಿಡಲ್ಪಟ್ಟವರನ್ನು ನಕಾರಾತ್ಮಕವಾಗಿ ಕಾಣಬೇಕಿಲ್ಲ. ನೂತನ ಪದಾಧಿಕಾರಿಗಳ ಪಟ್ಟಿಯಲ್ಲಿ ಹೊಸಬರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ಪಕ್ಷದ ನಾಯಕತ್ವಕ್ಕೆ ಪದೇ ಪದೇ ಮುಜುಗರ ತರುವ ಹೇಳಿಕೆ ನೀಡುತ್ತಿದ್ದ ಹಾಗೂ ನಿಷ್ಕ್ರಿಯರಾಗಿದ್ದ ಕೆಲವರನ್ನು ಕೈ ಬಿಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಹಾಗೂ ಈಶಾನ್ಯದಲ್ಲಿ ಬಿಜೆಪಿ ಇತ್ತೀಚೆಗೆ ಬಲವಾಗುತ್ತಿದ್ದು, ಅಲ್ಲಿನವರಿಗೆ ಆದ್ಯತೆ ನೀಡಲಾಗಿದೆ.

ಆದರೆ, ಸಂಸದೀಯ ಮಂಡಳಿಯ ಪ್ರಮುಖ ಹುದ್ದೆಗಳೂ ಸೇರಿದಂತೆ ಕೆಲ ಹುದ್ದೆಗಳನ್ನು ಖಾಲಿ ಬಿಡಲಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಂಪುಟ ಪುನರ್‌ರಚನೆಗೆ ಮುಂದಾಗುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ.

# ನಾಳಿನ ಬಂದ್ ಬೆಂಬಲಕ್ಕೆ ರೈತರ ಮನವಿ

**ತಿದ್ದುಪಡಿ ಕಾಯ್ದೆಗಳ ಹಿಂಪಡೆಗೆ ಆಗ್ರಹ**

ದಾವಣಗೆರೆ, ಸೆ.26- ಎಪಿಎಂಸಿ ಕಾಯ್ದೆ, ಭೂ ಸುಧಾರಣ ಕಾಯ್ದೆ, ವಿದ್ಯುತ್ ಕಾಯ್ದೆ ಇವುಗಳನ್ನು ಸುಗ್ರೀವಾಜ್ಞೆ ಮುಖೇನ ಜಾರಿಗೊಳಿಸಿ ತಿದ್ದುಪಡಿ ಮಾಡಿರುವುದು ರೈತರಿಗೆ ಮರಣ ಶಾಸನವಾಗಿವೆ.

ಕೂಡಲೇ ಈ ತಿದ್ದುಪಡಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸರ್ಕಾರಕ್ಕೆ ಒತ್ತಾಯಿಸಿವೆ.

ಸರ್ಕಾರಗಳು ರೈತ, ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿದ್ದು, ಕೊರೊನಾದಂತಹ ಸಂಕಷ್ಟದ ಸಮಯದಲ್ಲೂ ರೈತರು, ಕಾರ್ಮಿಕರಿಗೆ ಮಾರಕವಾಗುವಂತಹ ರೀತಿಯಲ್ಲಿ ಕಾಯ್ದೆಗಳಿಗೆ ತಿದ್ದುಪಡಿ ತಂದಿರುವುದು ಸರಿಯಲ್ಲ ಎಂದು ಸಂಘದ ಮುಖಂಡ ಹೊನ್ನೂರು ಮುನಿಯಪ್ಪ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಆಕ್ಷೇಪಿಸಿದರು.

ರೈತರಿಗೆ ಮಾರಕವಾಗಿರುವ ಕಾಯ್ದೆಗಳ ತಿದ್ದುಪಡಿ ವಿರೋಧಿಸಿ, ನಾಡಿದ್ದು ದಿನಾಂಕ 28ರ ಸೋಮವಾರ ಕರೆ ನೀಡಿರುವ ಬಂದ್‌ಗೆ ಎಲ್ಲಾ ಸಂಘಟನೆಗಳು ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಮುಖಂಡರಾದ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ದಾಗಿನಕಟ್ಟೆ ಬಸವರಾಜ್, ಕಣಿವೆ ಬಿಳಚಿ ರಂಗಸ್ವಾಮಿ, ಪ್ರಶಾಂತ್ ಮತ್ತೂರು, ದೊರೆಸ್ವಾಮಿ, ಮಲ್ಲಶೆಟ್ಟಿಹಳ್ಳಿ ಹನುಮೇಶ್, ಮಂಜುನಾಥ್, ರವಿಗೌಡ ಇದ್ದರು.

# ಹರಿಹರದಲ್ಲಿ ಮಾಸ್ಕ್ ಧರಿಸದ ಸಾರ್ವಜನಿಕರಿಗೆ ದಂಡ



ಹರಿಹರ,ಸೆ 26 - ನಗರಸಭೆ ವತಿಯಿಂದ ಮಾಸ್ಕ್ ಧರಿಸದ ಸಾರ್ವಜನಿಕರಿಂದ 1 ಲಕ್ಷದ 20 ಸಾವಿರ ರೂ. ದಂಡ ವಸೂಲಿ ಮಾಡಲಾಗಿದೆ ಎಂದು ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮೀ ತಿಳಿಸಿದ್ದಾರೆ.

ನಗರದ ಮುಖ್ಯ ರಸ್ತೆ, ಗಾಂಧಿ ವೃತ್ತ, ತರಕಾರಿ ಮಾರುಕಟ್ಟೆ, ರಾಣಿ ಚೆನ್ನಮ್ಮ ವೃತ್ತ, ಹಳೆ ಪಿ.ಬಿ ರಸ್ತೆ,, ಹರಪನಹಳ್ಳಿ ರಸ್ತೆ, ಶಿವಮೊಗ್ಗ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರಿಗೆ ದಂಡ ವಿಧಿಸಿ ಆರೋಗ್ಯ ದೃಷ್ಟಿಯಿಂದ ಮಾಸ್ಕ್ ಧರಿಸುಂತೆ ತಿಳಿ ಹೇಳುವುದರ ಮೂಲಕ ಮತ್ತೊಮ್ಮೆ ಓಡಾಡುವ ವೇಳೆ ಮಾಸ್ಕ್ ಧರಿಸಿಕೊಂಡು ಓಡಾಡುವಂತೆ ಹೇಳಿದರು.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೊರೊನಾ ಮಹಾಮಾರಿ ಯಿಂದ ಸಾರ್ವಜನಿಕರು ಅನವಶ್ಯಕ ಓಡಾಟ ಮಾಡುತ್ತಿರುವುದನ್ನು ತಡೆಗಟ್ಟಲು ಮತ್ತು ಸಾಮಾಜಿಕ ಅಂತರ ಕಾಯ್ದುಕೊಂಡು ಸುರಕ್ಷಿತ ಜೀವನ ನಡೆಸುವಂತೆ ವಿವಿಧ ರೀತಿಯಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಸರ್ಕಾರದ ವತಿಯಿಂದ ಮಾಡಿದರೂ ಸಹ ಸಾರ್ವಜನಿಕರು ಅರಿತುಕೊಳ್ಳಲು ಮುಂದಾಗದೇ ಇರುವುದರಿಂದ ಮತ್ತು ನಿರ್ಲಕ್ಷ್ಯ ಭಾವನೆ ಹೆಚ್ಚಾಗಿ ಇರುವುದರಿಂದ ಸಾರ್ವಜನಿಕರಿಗೆ ದಂಡವನ್ನು ವಿಧಿಸುವುದಕ್ಕೆ ಮುಂದಾಗಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಕಾಶ್, ಅಣ್ಣಪ್ಪ, ಮಂಜುನಾಥ್, ವಸಂತ್, ಮೋಹನ್, ಬಸವರಾಜ್ ಹಾಗು ಇತರರು ಹಾಜರಿದ್ದರು.

## ಎಸ್ಪಿ ಹನುಮಂತರಾಯ - ವೈ. ರಾಮಪ್ಪ ನಡುವೆ ಮಾತಿನ ಚಕಮಕಿ





ದಾವಣಗೆರೆ, ಸೆ.26- ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಕಾಂಗ್ರೆಸ್ ಮುಖಂಡರೋರ್ವರ ನಡುವೆ ಮಾತಿನ ಚಕಮಕಿ ನಡೆದು ಪರಿಶಿಷ್ಟ ಜಾತಿ-ಪಂಗಡಗಳ ಕುಂದುಕೊರತೆ ಸಭೆಯಲ್ಲಿ ಕೆಲ ಕಾಲ ಗೊಂದಲವುಂಟಾದ ಘಟನೆ ನಗರದಲ್ಲಿ ಇಂದು ನಡೆದಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಂದು ಕೊರತೆ ಸಭೆ ವೇಳೆ ಕಾಂಗ್ರೆಸ್ ಮುಖಂಡರೂ ಆದ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಡಾ. ವೈ. ರಾಮಪ್ಪ ಸಲಹೆ ನೀಡುವಾಗ ಕೆಲ ಪ್ರಕರಣಗಳನ್ನು ಪ್ರಸ್ತಾಪಿಸುತ್ತಾ ತಾವು ನೀಡಿದ್ದ ಪ್ರಕರಣಗಳಲ್ಲಿ ಈವರೆಗೆ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡಿಲ್ಲವೆಂದರು.

ಆಗ ಈ ಬಗ್ಗೆ ಗರಂ ಆದ ಎಸ್ಪಿ ಹನುಮಂತರಾಯ, ಈಗಾಗಲೇ ತನಿಖೆಯಲ್ಲಿರುವ ಪ್ರಕರಣಗಳನ್ನು ಈ ಸಭೆಯಲ್ಲಿ ಚರ್ಚಿಸದಂತೆ ಏರು ಧ್ವನಿಯಲ್ಲಿ ಹೇಳಿದರು.

ಆಗ ಕೋಪಗೊಂಡ ರಾಮಪ್ಪ ಅವರು ಅಷ್ಟೇ ತೀಕ್ಷ್ಣವಾಗಿ ಮಾತಿಗಿಳಿದು, ನಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿದ್ದೀರಿ ಎಂದು ಎಸ್ಪಿ ಮೇಲೆ ಮುನಿಸಿಕೊಂಡ ತಮ್ಮ ಆಕ್ರೋಶವನ್ನು ಹೊರ ಹಾಕುತ್ತಾ ಸಭೆಯಿಂದ ಹೊರ ನಡೆದರು. ಇದರಿಂದ ಸಭೆಯಲ್ಲಿ ಸುಮಾರು ಹೊತ್ತು ಗದ್ದಲದ ಸ್ಥಿತಿ ಏರ್ಪಟ್ಟಿತು.

# ಬರಡಾಗುತ್ತಿದೆ ಉಳ್ಳಾಗಡ್ಡಿ ಬೆಳೆದವರ ಬದುಕು

**ಮನೋಹರ ಮಲ್ಲಾಡದ**

ರಾಣೇಬೆನ್ನೂರು,ಸೆ.26- ಅತೀವೃಷ್ಠಿ, ಅನಾವೃಷ್ಠಿ, ರೋಗ-ರುಜಿನ, ಗೊಬ್ಬರ, ಬೀಜಗಳ ಅಭಾವ ಅಥವಾ ಕಳಪೆ ಬೀಜ (ಕೆಲ ರೈತರು ಅಂಗಡಿಗಳು ಇವೆ) ಮಾರಾಟ ಹೀಗೆ ಒಂದಿಲ್ಲೊಂದು ಸಮಸ್ಯೆಗಳಿಂದ ರೈತ ಪ್ರತಿವರ್ಷ ಸಂಕಷ್ಟಕ್ಕೀಡಾ ಗುತ್ತಿರುವುದು ಸಾಮಾನ್ಯವಾಗಿದೆ.

ತಾಲ್ಲೂಕಿನ ಹಲಗೇರಿ, ಬೆನಕನಕೊಂಡ, ಆಲದಕಟ್ಟಿ, ಅಂತರವಳ್ಳಿ, ಕುಪ್ಪೇಲೂರು, ಇಟಗಿ, ಚಳಗೇರಿ, ಅಸುಂಡಿ, ಹೂಲಿಹಳ್ಳಿ, ಕಾಕೋಳ, ಮೈದೂರು, ಗುಡಗೂರು, ಗಂಗಾಪೂರ, ಉಕ್ಕುಂದ, ಸರ್ವಂದ ಮುಂತಾದ ಹೆಚ್ಚು ಈರುಳ್ಳಿ ಬೆಳೆಯುವ ಗ್ರಾಮಗಳು ಸೇರಿದಂತೆ ತಾಲ್ಲೂಕಿನ ಪ್ರಮೂಖ ಬೆಳೆಗಳಲ್ಲಿ ಉಳ್ಳಾಗಡ್ಡಿಯೂ ಸೇರುತ್ತದೆ.

ದನ-ಕರು, ಮನೆ , ದನದ ಮನೆ, ಮದುವೆ-ಮುಂಜಿ ಮುಂತಾದ ಒಂದಿಲ್ಲೊಂದು ಕಾರ್ಯಗಳಿಗೆ, ಕೊನೆಗೆ ಆರು ತಿಂಗಳ ಅನ್ನಕ್ಕೆ ಆಸರೆ



ಆಗುತ್ತದೆ ಎನ್ನುವ ನಂಬುಗೆ ರೈತರದಾಗಿದ್ದು, 15 ರಿಂದ 20 ಎಕರೆಯ ದೊಡ್ಡ ರೈತರು, ಒಂದರಿಂದ ಅರ್ಧ ಎಕರೆ ಈರುಳ್ಳಿ ಬೆಳೆಯುವ ಸಣ್ಣ ರೈತರನ್ನು ಇಲ್ಲಿ ಗುರುತಿಸಬಹುದು.

ಮಳೆ ಹೆಚ್ಚು ಸುರಿದಿದ್ದರಿಂದ ಸರಿಯಾಗಿ ಹುಟ್ಟಲಿಲ್ಲ. ಹುಟ್ಟಿದ್ದು ತೇವಾಂಶ ಹೆಚ್ಚಾಗಿ ಬೇರು ಸಮೇತ ಕೊಳೆತಿದೆ. ಬೀಜ, ಗೊಬ್ಬರ,ಕಳೆ, ಕೂಲಿ, ಟ್ರ್ಯಾಕ್ಟರ್ ಬಾಡಿಗೆ ಸೇರಿದಂತೆ ಸಾವಿರಾರು ರೂ ಖರ್ಚಾಗಿದೆ. ಹೀಗಾದರೆ ಬರಿಗೈಲಿರುವ ನಾವು ಬದುಕು ಸಾಗಿಸುವುದು ಹೇಗೆ? ಎನ್ನುವ ಚಿಂತೆ ಸಣ್ಣ ರೈತರದ್ದು.

ಬಿತ್ತನೆ ಕಾಲದಲ್ಲಿ ಸಕಾಲಕ್ಕೆ ಮುಂಗಾರು ಮಳೆ ಬಿದ್ದಿದ್ದರಿಂದ ನಮ್ಮದು ಈರುಳ್ಳಿ ಚನ್ನಾಗಿ ಬಂದಿದೆ. ಅತಿಯಾದ ಮಳೆಗೆ ತೇವಾಂಶ ಹೆಚ್ಚಾಗಿ ಹುಲ್ಲು ತುಂಬಿಕೊಂಡಿದ್ದರಿಂದ ಕಳೆ ನಾಶಕ, ರಸಗೊಬ್ಬರ, ಔಷಧ ಮುಂತಾದವು ಹಾಕಿ ಫಸಲು ಉಳಿಸಿಕೊಂಡವರು, ದರ ಹೆಚ್ಚಾಗಬಹುದು ಎನ್ನುವ ಆಸೆಯಿಂದ ಕಿತ್ತು ಗೂಡಾಕಿದ್ದು ಮತ್ತೆ 8-10 ದಿನಗಳಿಂದ ಸುರಿದ ಮಳೆಗೆ ಎಲ್ಲ ಕೊಳೆತು ನಾರುತ್ತಿದೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎನ್ನುವ ಗೋಳು ಅನೇಕರದ್ದು.

ಮಕ್ಕಳ ಮದುವೆ ಮಾಡಬೇಕಿತ್ತು, ದನದ ಮನೆ ಹಾಕಿಸಬೇಕಿತ್ತು, ಟ್ರ್ಯಾಕ್ಟರ್ ತರಬೇಕಿತ್ತು. ಎತ್ತುಗಳನ್ನ ಬದಲಿಸ ಬೇಕಿತ್ತು. ಈ ವರ್ಷ ಈ ಎಲ್ಲವುಗಳನ್ನು ಪೂರೈಸಿಕೊಳ್ಳುವ ಹಂಬಲ ಹೊತ್ತಿದ್ದ ದೊಡ್ಡ ರೈತರು, ಎಲ್ಲದಕ್ಕೂ ತಣ್ಣೀರು ಎರಚಿದಂತಾಗಿ ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳುವಂತಾಗಿದೆ.

## ನಕಲಿ ಗೌರವ ಡಾಕ್ಟರೇಟ್ ಪಡೆಯದಂತೆ ತಡೆದ ಪೊಲೀಸರು



ಮೈಸೂರು,ಸೆ.26- ಇಲ್ಲಿನ ಖಾಸಗಿ ಹೋಟೆಲೊಂದರಲ್ಲಿ ಇಂದು ನಡೆಯುತ್ತಿದ್ದ ನಕಲಿ ಡಾಕ್ಟರೇಟ್ ಹಾಗೂ ಪ್ರಶಸ್ತಿ ವಿತರಣೆ ಸಮಾರಂಭವನ್ನು ಪೊಲೀಸರು ತಡೆದ ಘಟನೆ ನಡೆದಿದೆ.

ನಕಲಿ ಯೂನಿವರ್ಸಿಟಿ ಹೆಸರಿನಲ್ಲಿ ಸಮಾಜ ಸೇವಕರಿಗೆ ಡಾಕ್ಟರೇಟ್ ಮತ್ತು ಪ್ರಶಸ್ತಿ ವಿತರಣೆ ಮಾಡುತ್ತಿರುವ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು, ಪ್ರಶಸ್ತಿ ಪುರಸ್ಕೃತರೆಂದು ಗುರುತಿಸಿಕೊಂಡವರಿಗೆ ಇದು ನಕಲಿ ಡಾಕ್ಟರೇಟ್ ಎಂಬುದನ್ನು ಮನವೊಲಿಸಿದರು.

ಡಾಕ್ಟರೇಟ್ ಪ್ರಶಸ್ತಿ ಪುರಸ್ಕೃತರೆಂದು ಗುರುತಿಸಿಕೊಂಡವರಲ್ಲಿ ಹರಿಹರದ ಶಾಸಕ ಎಸ್. ರಾಮಪ್ಪ ಕೂಡಾ ಒಬ್ಬರು.

ಘಟನೆಯ ಹಿನ್ನೆಲೆಯಲ್ಲಿ ಪೊಲೀಸರು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಆಯೋಜಕರೆನ್ನಲಾದ ತಮಿಳುನಾಡು ಮೂಲದ ನಂಬಿಯಾರ್ ಹಾಗೂ ಶ್ರೀನಿವಾಸ್ ಎಂಬುವವರನ್ನು ತಮ್ಮ ವಶಕ್ಕೆ ಪಡೆದಿದ್ದಾರೆ.

ಅಲ್ಲದೇ, ಡಾಕ್ಟರೇಟ್ ಹಂಚಲು ತಂದಿದ್ದ 150 ನಕಲಿ ಸರ್ಟಿಫಿಕೇಟ್ ಹಾಗೂ ವಿವಿಧ ದಾಖಲೆಗಳನ್ನೂ ಸಹ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಇಂಟರ್ ನ್ಯಾಷನಲ್ ಗ್ಲೋಬಲ್ ಪೀಸ್ ಹೆಸರಿನ ಯೂನಿವರ್ಸಿಟಿಯು ನಕಲಿ ಡಾಕ್ಟರೇಟ್ ಮತ್ತು ಪ್ರಶಸ್ತಿಗಳನ್ನು ಇದೇ ರೀತಿ ಕಳೆದ 8 ವರ್ಷಗಳಿಂದ ನೀಡುತ್ತಾ ಬಂದಿದೆ. ಈ ಯೂನಿವರ್ಸಿಟಿಯು ಒಂದು ಪ್ರಶಸ್ತಿಗೆ 25 ಸಾವಿರ ರೂ. ನಿಂದ 1 ಲಕ್ಷ ರೂ.ಗಳನ್ನು ಪಡೆದು ಡಾಕ್ಟರೇಟ್ ಮತ್ತು ಪ್ರಶಸ್ತಿಯನ್ನು ನೀಡುತ್ತಿತ್ತು ಎನ್ನಲಾಗಿದೆ.

ಘಟನೆ ಕುರಿತಂತೆ ಮಾಹಿತಿ ನೀಡಿರುವ ಮೈಸೂರು ನಗರ ಡಿಸಿಪಿ ಪ್ರಕಾಶ್ ಗೌಡ ಅವರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ ಎಂದು ವಿವರಿಸಿದ್ದಾರೆ.

## ನಗರದಲ್ಲಿ 'ಸೂಜಿ' ಕಾದಂಬರಿ ಲೋಕಾರ್ಪಣೆ




ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ದಿ. ಶಿವಲಿಂಗಪ್ಪ ಚಾರಿಟೆಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಕುವೆಂಪು ಕನ್ನಡ ಭವನದಲ್ಲಿ ಸಾಹಿತಿ ಪಾಪು ಗುರು ಅವರ 'ಸೂಜಿ' ಕಾದಂಬರಿ ಲೋಕಾರ್ಪಣೆ ಸಮಾರಂಭವು ಇಂದು ನಡೆಯಲಿದೆ.

ಬೆಳಿಗ್ಗೆ 10.30ಕ್ಕೆ ಮಾಜಿ ಶಾಸಕ ವೈ.ಎಸ್.ವಿ. ದತ್ತಾ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಡಾ.ಎಚ್.ಎಸ್. ಮಂಜುನಾಥ ಕುರ್ಕಿ ಸಮಾರಂಭವನ್ನು ಉದ್ಘಾಟಿಸುವರು. ಡಾ.ಮಲ್ಲಿಕಾರ್ಜುನ ಕಲಮರಹಳ್ಳಿ ಅಧ್ಯಕ್ಷತೆ ವಹಿಸುವರು. ಡಾ. ಎ.ಬಿ. ರಾಮಚಂದ್ರಪ್ಪ ಸೂಜಿ ಕಾದಂಬರಿಯ ಅವಲೋಕನ ನಡೆಸಲಿದ್ದಾರೆ. ತೇಜಸ್ವಿ ಪಟೇಲ್ ವಿಶೇಷ ಆಹ್ವಾನಿತರಾಗಿದ್ದಾರೆ.

## ನಗರದಲ್ಲಿ ಇಂದು ಕನ್ನಡಪರ ಸಂಘಟನೆ ಸಭೆ

ನಾಳೆ ಸೋಮವಾರ ಕರ್ನಾಟಕ ಬಂದ್ ಗೆ ಕರೆ ಕೊಟ್ಟಿರುವ ಹಿನ್ನೆಲೆಯಲ್ಲಿ ಜಿಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟದ ಸಭೆಯನ್ನು ಇಂದು ಬೆಳಿಗ್ಗೆ 11.45 ಕ್ಕೆ ರೋಟರಿ ಬಾಲಭವನದಲ್ಲಿ ಕರೆಯಲಾಗಿದೆ ಜಿಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಟಿ.ಶಿವಕುಮಾರ್ ತಿಳಿಸಿದ್ದಾರೆ.

# ಗಾಂಧಿ ಭವನ ಕಾಮಗಾರಿ ವೀಕ್ಷಿಸಿದ ಡಿಸಿ



ದಾವಣಗೆರೆ, ಸೆ.26- ನಗರದ ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ 3 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಗಾಂಧಿ ಭವನದ ಕಾಮಗಾರಿ ಸ್ಥಳಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ನಿನ್ನೆ ಭೇಟಿ ನೀಡಿ ಪರಿಶೀಲಿಸಿದರು.

ಬಳಿಕ ಮಾತನಾಡಿದ ಅವರು, ನಿರ್ಮಿತಿ ಕೇಂದ್ರದವರು ಗಾಂಧಿ ಭವನ ನಿರ್ಮಾಣದ ಕಾಮಗಾರಿ ಹೊಣೆ ವಹಿಸಿಕೊಂಡಿದ್ದು, ಉತ್ತಮ ಗುಣಮಟ್ಟದಲ್ಲಿ ಕಾಮಗಾರಿ ನಡೆಸಬೇಕು. ಅಲ್ಲದೆ ಆದಷ್ಟು ಶೀಘ್ರ ಗಾಂಧಿ ಭವನದ ಉದ್ಘಾಟನೆ ನೆರವೇರಿಸಲು ಅನುವಾಗುವಂತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಅಶೋಕ್ ಕುಮಾರ್, ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ ರವಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಲೋಕಾಯುಕ್ತ ಕಚೇರಿಯ ಹೊಸ ದೂರವಾಣಿ ಸಂಪರ್ಕ

ದಾವಣಗೆರೆ ಸೆ.26 - ನಗರದ ಲೋಕಾಯುಕ್ತ ಕಚೇರಿಯ ಹಳೆಯ ಸ್ಥಿರ ದೂರವಾಣಿ : 08192-230164 ಸಂಪರ್ಕವನ್ನು ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಕಡಿತಗೊಳಿಸಿ ಹೊಸ ದೂರವಾಣಿ ಪಡೆಯಲಾಗಿದೆ. ಪೊಲೀಸ್ ಅಧೀಕ್ಷಕರು ಲೋಕಾಯುಕ್ತ, ದಾವಣಗೆರೆ ಇವರೊಂದಿಗೆ ವ್ಯವಹರಿಸುವ ರಹಸ್ಯ ಸರ್ಕಾರಿ/ಅರೆ ಸರ್ಕಾರಿ ಪತ್ರಗಳನ್ನು ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ ಕೊಠಡಿ ಸಂಖ್ಯೆ:38, ಜಿಲ್ಲಾಡಳಿತ ಭವನ, ದಾವಣಗೆರೆ ಹಾಗೂ ದೂರವಾಣಿ ಮುಖಾಂತರ ಸಂಪರ್ಕಿಸಿ ಮಾತನಾಡುವುದಾದಲ್ಲಿ ಇನ್ನು ಮುಂದೆ ಹೊಸ ಸ್ಥಿರ ದೂರವಾಣಿ ಸಂಖ್ಯೆ 08192-296027 ಕರೆ ಮಾಡಬಹುದೆಂದು ಪೊಲೀಸ್ ಅಧೀಕ್ಷಕ ಜಿ.ಸಿ.ರವಿಕುಮಾರ್ (ಪ್ರಭಾರ) ತಿಳಿಸಿದ್ದಾರೆ.

# ಡಿ. ಬಸವರಾಜ್ ಕೆಪಿಸಿಸಿ ವಕ್ತಾರ



ದಾವಣಗೆರೆ, ಸೆ.26- ತಮ್ಮನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವಕ್ತಾರರನ್ನಾಗಿ ನೇಮಕ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ನೀಡಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಮುಖಂಡ ಡಿ. ಬಸವರಾಜ್ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದು ಮಾತನಾಡಿದ ನಗರ ಪಾಲಿಕೆ ಸದಸ್ಯ ಕೆ. ಚಮನ್‌ಸಾಬ್, ರಾಜ್ಯ ಮತ್ತು ಕೇಂದ್ರ ಸರ್ಕಾರದ ಇತ್ತೀಚಿನ ಕಾಯ್ದೆಗಳು ಜನ ಮತ್ತು ರೈತ ವಿರೋಧಿಯಾಗಿದ್ದು, ಎಪಿಎಂಸಿ ಕಾಯ್ದೆಯಿಂದ ಸಾವಿರಾರು ಹಮಾಲರು ಬೀದಿಗೆ ಬೀಳಲಿದ್ದಾರೆಂದು ಸರ್ಕಾರದ ನೀತಿಯನ್ನು ಟೀಕಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಪಾಲಿಕೆ ಸದಸ್ಯರುಗಳಾದ ದೇವರಮನಿ ಶಿವಕುಮಾರ್, ಗಡಿಗುಡಾಳ್ ಮಂಜುನಾಥ್, ಕಾಂಗ್ರೆಸ್ ಮುಖಂಡರುಗಳಾದ ಕೆ.ಎಂ. ಮಂಜುನಾಥ್, ಬಿ.ಹೆಚ್. ಉದಯಕುಮಾರ್, ದಾದಾಪೀರ್, ಡಿ. ಶಿವಕುಮಾರ್ ಇದ್ದರು.


Girmilk

Healthy cow = Healthy Milk

100% Pure Bred Desi Gir Cows, Fed With **Ayurvedic Herbs** And **Special Minerals** A Holistic And Wholesome Diet For The Cows.

A2 Protein GIR Cow milk PURE

Shatawari Tulsi Turmeric Ginger Garlic Jaggery



Available in 500 Ml, 1L Packs

Pure Ghee Made of Desi A2 Gir Milk is also available.

Buttermilk and Butter from gir Milk is also available.

Kasal Inc, +91 99021 85212, +91 70194 81919

Dairy at Madalur, Davanagere.



## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ॥

ದಾವಣಗೆರೆ ಸಿಟಿ ಬೈಪಾಸ್ ಪಕ್ಕ, ಬನಶಂಕರಿ ಬಡಾವಣೆ ವಾಸಿಗಳಾದ ಶ್ರೀಮತಿ ದಿ॥ ನಾಗಮ್ಮ ಶ್ರೀ ದಿ॥ ಭರಮಪ್ಪನವರ ಮಕ್ಕಳಾದ ಶ್ರೀಮತಿ ಶ್ರೀ ಬಿ.ಗಿರೀಶ್ ಮತ್ತು ಸಹೋದರರು ಹಾಗೂ ಸಹೋದರಿಯರು ಮಾಡುವ ವಿಜ್ಞಾಪನೆಗಳು.

ದಿನಾಂಕ : 19.09.2020 ನೇ ಶನಿವಾರ ರಾತ್ರಿ : 9.50ಕ್ಕೆ ನಮ್ಮ ತಾಯಿಯವರಾದ

**ಶ್ರೀಮತಿ ನಾಗಮ್ಮನವರು**

(ಜಲ್ಲಿ ವ್ಯಾಪಾರಿಗಳು)

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ 27.09.2020ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀಮತಿ ಶ್ರೀ ಬಿ.ಗಿರೀಶ್ ಮತ್ತು ಸಹೋದರರು ಹಾಗೂ ಸಹೋದರಿಯರು ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ: 98453 42626

ವಿ.ಸೂ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte